# ಬೃಹಚ್ಚರಣ

**ಸಂಘದ ತ್ರೈಮಾಸಿಕ ವಾರ್ತಾ ಪತ್ರಿಕೆ**

**ಸಂಘದ ಸದಸ್ಯರಾಗಿ**

ಮಹಾ ಪೋಷಕರು – 25,000/–
ಪೋಷಕರು – 5,000/–
ಸದಸ್ಯತ್ವ – 1,000/–
ವಾರ್ಷಿಕ ನಿರ್ವಹಣೆ – 500/–

**ಸಂಪುಟ : 8 ಸಂಚಿಕೆ : 4 ಖಾಸಗಿ ಪ್ರಸಾರಕ್ಕಾಗಿ ಅಕ್ಟೋಬರ್–ಡಿಸೆಂಬರ್ 2018**


## ಅಧ್ಯಕ್ಷರ ನುಡಿ

ಆತ್ಮೀಯರೇ ನಮಸ್ಕಾರ


ಮುಂಬರುವ 2019ನೇ ವರ್ಷವು ಸಮುದಾಯದ ಪ್ರತಿ ಕುಟುಂಬದಲ್ಲೂ ಹರ್ಷ ತರಲಿ.

ಸಂಘದ ತೀರ್ಮಾನದಂತೆ ವೈಕುಂಠವಾಹನವನ್ನು 'ಆರ್ಯಾವರ್ತ' ಸಂಸ್ಥೆಗೆ ನೀಡಿದ ಸಮಾರಂಭವು ದಿ॥ 28–10–2018ರಂದು ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ 'ಭ್ರಮರಾಂಭಿಕ ಭವನ'ದಲ್ಲಿ ನಡೆಯಿತು. ತಮ್ಮೆಲ್ಲರ ಸಹಕಾರದಿಂದ ನಡೆದ ಈ ಸಮಾರಂಭದಲ್ಲಿ ಭಾಗವಹಿಸಿದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾಧ್ಯಕ್ಷ ಶ್ರೀ ವೆಂಕಟನಾರಾಯಣ ಹಾಗೂ 'ಆರ್ಯಾವರ್ತ' ಸಂಸ್ಥೆಯ ಅಧ್ಯಕ್ಷ ಶ್ರೀ ನರಸಿಂಹಮೂರ್ತಿ ಮತ್ತು ಕಾರ್ಯದರ್ಶಿ ಶ್ರೀ ಭಾಸ್ಕರಮೂರ್ತಿಯವರು ನಮ್ಮ ಸಂಘದ ಕೊಡುಗೆಯನ್ನು ಶ್ಲಾಘಿಸಿದರು.

ಸಂಘವು ಹಮ್ಮಿಕೊಂಡಿದ್ದ ಒಂದು ದಿನದ ಪ್ರವಾಸ (25.11.2018) ಸುಗಮವಾಗಿರಲು ಶ್ರಮಿಸಿದವರಿಗೆಲ್ಲ ಧನ್ಯವಾದಗಳು ಹಾಗೂ ಪ್ರವಾಸದ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ ಪ್ರತಿಯೊಬ್ಬರಿಗೂ ವಂದನೆಗಳು.

ಸಂಘವು ಎಲ್ಲಾ ರೀತಿಯಿಂದ ಬೆಳೆಯುತ್ತಿರುವ ಈ ಹಂತದಲ್ಲಿ ಯುವ ಸದಸ್ಯರು ಸಂಘದ ಕಾರ್ಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಕೋರಿಕೆ. 2019ನೇ ಇಸವಿ ದಿನಚರಿ ಇಷ್ಟರಲ್ಲೇ ತಮಗೆ ತಲುಪಲಿದೆ.

ವಂದನೆಗಳು,



**ಎಸ್. ಸೋಮಸುಂದರ**
ಅಧ್ಯಕ್ಷರು




ಸಂಘದಿಂದ 'ವೈಕುಂಠವಾಹನ'ವನ್ನು 'ಆರ್ಯಾವರ್ತ' ಸಂಸ್ಥೆಗೆ ನೀಡಿದ ಸಂದರ್ಭ


## ಸಂಪಾದಕೀಯ

ನಮಸ್ಕಾರ

ಸಂಚಿಕೆಗೆ ಲೇಖನಗಳು ಹಾಗೂ ಛಾಯಾಚಿತ್ರಗಳನ್ನು ಇನ್ನು ಮುಂದೆ mmdbs.mag@gmail.com ಗೆ ಕಳುಹಿಸುವುದು. ಪತ್ರ, ದೂರವಾಣಿ ಹಾಗೂ ವಾಟ್ಸ್‌ಆಫ್ ಮೂಲಕ ಸಂಚಿಕೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವವರಿಗೆಲ್ಲಾ ವಂದನೆಗಳು.

ನಿಮ್ಮೆಲ್ಲರ ಸಹಕಾರ ಹೀಗೇ ಮುಂದುವರಿಯಲೆಂದು ಬಿನ್ನಹ.

ನಿಮ್ಮವ



**ಕೆ.ಸಿ. ನಟರಾಜ್**
ಸಂಪಾದಕ

**ಕನಕಪುರ ಕಲ್ಲಹಳ್ಳಿ ವೆಂಕಟರಮಣ ದೇವಾಲಯದಲ್ಲಿ ಸದಸ್ಯರು**



# ಸಂಘದಿಂದ 'ವೈಕುಂಠವಾಹನ'ವನ್ನು ಆರ್ಯಾವರ್ತ ಸಂಸ್ಥೆಗೆ ನೀಡಿದ ಸಂದರ್ಭದ ಚಿತ್ರಗಳು



ಕೃಪೆ : ಶಿವಕುಮಾರ್ ನಟರಾಜ್











ಕಾರ್ಯಕಾರಿ ಸಮಿತಿ ಸದಸ್ಯರು

## ಮೈ.ಮಂ.ದ್ರಾ.ಬೃಹಚ್ಚರಣ ಸಂಘ

(ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಂಗ ಸಂಸ್ಥೆ)

### ಕಾರ್ಯಕಾರಿ ಸಮಿತಿ

ಶ್ರೀಯುತರು

ಅಧ್ಯಕ್ಷರು

**ಎಸ್. ಸೋಮಸುಂದರ, 9900113298**

ಕಾರ್ಯಾಧ್ಯಕ್ಷರು

**ಎಚ್.ಕೆ. ಶಶಿಧರ್, 9845173766**

ಉಪಾಧ್ಯಕ್ಷರು

**ಎಸ್.ಸಿ. ಶ್ರೀನಿವಾಸ, 9845376949**

ಕಾರ್ಯದರ್ಶಿ

**ವಿ.ಎಸ್. ಮಣಿ, 9845055582**

ಸಹಕಾರ್ಯದರ್ಶಿಗಳು

**ಅರುಣ್ ವಿ., 9880166001**

**ಟಿ.ಎನ್. ರವಿಕಿರಣ್, 9972677005**

ಖಜಾಂಚಿ

**ಎಸ್. ಸತ್ಯನಾರಾಯಣ, 9980945699**

ಗೌರವ ಸದಸ್ಯರು

**ಕೆ.ಜಿ. ವೆಂಕಟೇಶ್, 9964012687**

**ಮಂಜುನಾರಾಯಣ್ ಕೆ. 9886114279**

**ಸರಸ್ವತಿ ನಟರಾಜನ್, 9480619730**

**ಆರ್. ಗಣೇಶ್ ಶ್ರೀಧರ್, 9880187686**

**ಟಿ.ಪಿ.ಸೂರ್ಯನಾರಾಯಣ, 9945484268**

**ಟಿ. ನಾಗೇಶ್, 9980662118**

**ಟಿ.ಎಸ್. ರಮೇಶನ್, 9663874531**

**ಕೆ.ಬಿ.ಎಸ್. ಶರ್ಮ, 94820 87344**

**ಶಂಕರಪ್ರಸಾದ್ ಬಿ.ಆರ್., 9845663833**

**ಸುಬ್ರಹ್ಮಣ್ಯಂ ಬೆಂಗಳೂರು, 9449869667**

**ಕೆ. ಗುಂಡಪ್ಪ, 9845332315**

**ಅರುಣ್ ಸೇತುರಾಮ್, 9900313929**

**ನಿತಿನ್‌ಭಾಸ್ಕರ್, 984441733**

ಲೆಕ್ಕಪರಿಶೋಧಕರು

**ಬಿ.ಎನ್.ಜಿ. ಪ್ರಸಾದ್, 9845128229**

**ಗೌರವ ಸಂಪಾದಕ ಮಂಡಳಿ – ಬೃಹಚ್ಚರಣ ಪತ್ರಿಕೆ**

**ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿ**

**ಬೆಂಗಳೂರು ಸುಬ್ರಹ್ಮಣ್ಯಂ, 9449869667**

**ಕೆ.ಸಿ. ನಟರಾಜ್, 9845113475,** ಸಂಪಾದಕರು

**ಲಲಿತಾ ರಮೇಶ್, 9945199637,** ಉಪಸಂಪಾದಕಿ

**ಶಿವಕುಮಾರ್ ಎನ್. 6362337254,** ಛಾಯಾಗ್ರಾಹಕ

## ವೈಕುಂಠ ವಾಹನಕ್ಕೆ ದೇಣಿಗೆ ನೀಡಿದ ದಾನಿಗಳು

**ಶ್ರೀಯುತರು**

| | |
|---|---|
| ಬಿ.ಎಸ್. ಪದ್ಮನಾಭ ಹಾಗೂ ಕುಟುಂಬ | 50,000.00 |
| ಎಸ್. ಸೋಮಸುಂದರ ಕುಟುಂಬ<br>ಎಸ್. ಚಂದ್ರಶೇಖರ ಕುಟುಂಬ<br>**(ಪೂಜ್ಯ ಸಣ್ಣೆ ಸೂರಪ್ಪ ಅವರ ಜ್ಞಾಪಕಾರ್ಥವಾಗಿ)** | 35,000.00 |
| ಬಿ.ಎನ್. ಗೋವಿಂದ ಪ್ರಸಾದ್ | 30,000.00 |
| ಗಣೇಶ್ ಕುಮಾರ್. ಬಿ.ಕೆ. | 25,000.00 |
| ಕಲ್ಯಾಣರಾಮನ್ ಚಂದ್ರಶೇಖರ್ | 25,000.00 |
| ಸಿ.ಎಸ್.ಎಸ್. ಮೂರ್ತಿ | 25,000.00 |
| ಎಸ್.ಸಿ. ಶ್ರೀನಿವಾಸ ಕುಟುಂಬ<br>ಎಸ್.ಸಿ. ರಾಘವಪ್ರಸಾದ್ ಕುಟುಂಬ<br>**(ಪೂಜ್ಯ ಚಂದ್ರಶೇಖರಯ್ಯ ಹಾಗೂ ಸತ್ಯವತಿ ಅವರ ಜ್ಞಾಪಕಾರ್ಥವಾಗಿ)** | 25,000.00 |
| ಉಮೇಶ್ ಸೋಮಶೇಖರ್ | 20,000.00 |
| ವೈಜಯಂತಿ | 15,000.00 |
| ಎಸ್.ಎ. ಸತ್ಯಮೂರ್ತಿ | 15,000.00 |
| ಆರ್. ವೆಂಕಟೇಶ್ ಪ್ರಸಾದ್ | 15,000.00 |
| ಅರುಣ್. ವಿ | 15,000.00 |
| ಶ್ರೀಧರ್ ರಾಮಚಂದ್ರನ್ | 12,000.00 |
| ಸುರೇಶ್ ರಾಜಗೋಪಾಲ್ | 11,000.00 |
| ವಿಜಯದೇವ್ ಮತ್ತು ಕುಟುಂಬ | 10,100.00 |
| ಟಿ.ವಿ.ಎಸ್. ಶರ್ಮಾ | 10,001.00 |
| ನಟೇಶ್ ಬಿ.ಎಸ್.<br>**(ಪೂಜ್ಯ ಶಿವಸ್ವಾಮಿ ಅವರ ಜ್ಞಾಪಕಾರ್ಥವಾಗಿ)** | 10,000.00 |
| ಆರ್.ಎಸ್. ರಮೇಶ್ | 10,000.00 |
| ಎ.ಆರ್. ಕೃಷ್ಣಶರ್ಮ | 10,000.00 |
| ಕೆ.ಸಿ. ಶೇಖರ್ | 10,000.00 |
| ಆರ್.ಎಸ್. ವೆಂಕಟೇಶ್ | 10,000.00 |
| ಶಾರದಾ ನಟರಾಜನ್ | 10,000.00 |
| ಎಚ್.ಡಿ. ಗಣೇಶ್ | 10,000.00 |
| ಎ.ವಿ. ಮಂಜುನಾಥ್ | 10,000.00 |
| ವಿದ್ಯಾ ರವಿಶಂಕರ್ | 10,000.00 |
| ಡಾ. ಸುಧಾಮ ಶಾಸ್ತ್ರಿ | 10,000.00 |
| ಸತ್ಯಪ್ರಸಾದ್ | 10,000.00 |
| ಅನಂತ್ ಕೆ.ಎಸ್. | 10,000.00 |
| ದಿ. ರಮಾಮಣಿ ಹಾಗೂ ದಿ. ರಂಗನಾಥನ್ ಅವರ ಜ್ಞಾಪಕಾರ್ಥವಾಗಿ ಅವರ ಕುಟುಂಬದಿಂದ | 10,000.00 |
| ಛಾಯಾಪತಿ (ನಿತಿನ್) | 10,000.00 |
| ಕೆ.ಎಸ್. ಅಶ್ವತ್ಥನಾರಾಯಣ ರಾವ್ | 10,000.00 |
| ಬಿ.ಎಸ್. ಸೂರ್ಯನಾರಾಯಣ್ | 10,000.00 |
| ತಾರಾ ರವೀಂದ್ರ ಮತ್ತು ಸೋದರಿಯರು | 10,000.00 |
| ರಂಗನಾಥ್ ಮತ್ತು ರಾಮೇಶ್ವರ ಪ್ರಸಾದ್ | 10,000.00 |
| ಕೆ.ಆರ್. ರಮಾದೇವಿ | 10,000.00 |
| ಡಿ. ಸತ್ಯಮೂರ್ತಿ ಕುಟುಂಬ | 10,000.00 |

| | |
|---|---|
| ಆರ್.ಎಸ್. ಅನಂತರಾಂ ಮತ್ತು ಕುಟುಂಬ | 10,000.00 |
| ಬಿ.ಆರ್. ಶಂಕರ್‌ಪ್ರಸಾದ್ ಅಟ್ಟೂರ್ ಕುಟುಂಬ | 10,000.00 |
| ಬಿ.ವಿ. ಶೇಷಾದ್ರಿ | 10,000.00 |
| ಬಿಂದು ವೆಂಕಟೇಶ್ | 10,000.00 |
| ಸರಸ್ವತಿ ನಾಗಭೂಷಣ್ | 10,000.00 |
| ಜಿ.ಎನ್. ಪ್ರಸಾದ್ | 7,500.00 |
| ಡಾ. ಸ್ವಾಮಿನಾಥ್ | 6,000.00 |
| ಶ್ರೀನಿವಾಸ್ ಆನಂದ್‌ರಾವ್ | 5,001.00 |
| ರವಿಕುಮಾರ್ | 5,001.00 |
| ಕೆ.ಟಿ. ನಾಗರಾಜ್ ಮತ್ತು ಕುಟುಂಬ | 5,001.00 |
| ರಾಜಣ್ಣ, ಮಲ್ಲಿಕಾರ್ಜುನ ದೇವಸ್ಥಾನ | 5,001.00 |
| ಗೋವಿಂದರಾಜು. ಡಿ.ಎಸ್. | 5,000.00 |
| ಸಂಧ್ಯಾ ಬಿ. | 5,000.00 |
| ಎಸ್. ಶ್ರೀನಿವಾಸಯ್ಯ | 5,000.00 |
| ಶ್ರೀನಿವಾಸನ್ | 5,000.00 |
| ಗಿರಿಜಾ ಮೂರ್ತಿ | 5,000.00 |
| ಬಿ. ಸುಬ್ರಮಣ್ಯಂ | 5,000.00 |
| ಜಿ.ಎಸ್. ವೆಂಕಟೇಶ್ | 5,000.00 |
| ಮೇಘಾ | 5,000.00 |
| ಸತೀಶ್ ಗೋಪಾಲ್ | 5,000.00 |
| ಶಿವಪ್ರಕಾಶ್ | 5,000.00 |
| ದಿವಾಕರ್ ರಾಮಚಂದ್ರನ್ | 5,000.00 |
| ಮಹೇಶ್ ಆರ್.ಎಸ್. | 5,000.00 |
| ಅನ್ನಪೂರ್ಣ ವಿ | 5,000.00 |
| ಬಿ.ಆರ್. ಸೇತುರಾಮ | 5,000.00 |
| ನಳಿನ ಎ.ವಿ. | 5,000.00 |
| ಟಿ.ಎಸ್. ಕೃಷ್ಣನ್ ಮತ್ತು ಕುಟುಂಬ | 5,000.00 |
| ಎಸ್.ಆರ್. ಬಾಲುಸುಬ್ರಹ್ಮಣ್ಯಂ | 5,000.00 |
| ಸೂರ್ಯಪ್ರಕಾಶ್ ಬೆಟ್ಟಕೋಟೆ | 5,000.00 |
| ಚಂದ್ರಮೌಳಿ | 5,000.00 |
| ನರೇಂದ್ರ. ವಿ. | 5,000.00 |
| ಸತ್ಯನಾರಾಯಣ ಎಸ್. | 5,000.00 |
| ಶ್ರೀಕಂಠೇಶ್ವರ ಕೆ. | 5,000.00 |
| ಪದ್ಮಾವತಿ ಎಸ್. | 5,000.00 |
| ಡಾ. ಪ್ರವೀಣ್‌ಕುಮಾರ್. ಎಸ್ | 5,000.00 |
| ಡಾ. ಕಲ್ಪನಾ | 5,000.00 |
| ಪರಿಮಳ. ಎಸ್ | 5,000.00 |
| ಜಿ.ಪಿ. ಲಕ್ಷ್ಮೀದೇವಿ | 5,000.00 |
| ಭ್ರಮರಾ ಗೋಪಿನಾಥ ಮತ್ತು ಸ್ನೇಹಿತರು | 4,710.00 |
| ಎ.ಆರ್. ರವೀಂದ್ರ ಶರ್ಮಾ | 4,000.00 |
| ವೆಂಕು ಹಾಗೂ ಗೆಳೆಯರು | 3,000.00 |
| ಎಸ್. ಶ್ರೀನಿವಾಸನ್ | 3,000.00 |
| ವಸಂತ್ ಬಿ.ಪಿ. | 3,000.00 |
| ಕೆ. ಸುಬ್ರಮಣಿ (ನಿತಿನ್) | 2,500.00 |
| ರಾಘವೇಂದ್ರ. ಬಿ.ಎನ್. | 2,021.00 |
| ಶೈಲಜಾ ಕುಮಾರಿ | 2,001.00 |
| ಗೋವಿಂದ ಬಿ. | 2,001.00 |
| ಶಾರ್ವರಿ ಎಸ್. ವಾಸನ್ | 2,000.00 |

| | |
|---|---|
| ಗಜಾನನ್. ಆರ್.ಎಸ್. | 2,000.00 |
| ಆರ್.ಎನ್. ಸ್ವಾಮಿನಾಥ್ | 2,000.00 |
| ಎ.ವಿ.ಶ್ರೀನಿವಾಸ್ | 2,000.00 |
| ಜಿ.ಎಸ್. ಸತ್ಯಮೂರ್ತಿ | 2,000.00 |
| ಶ್ರೀನಿವಾಸ್ ಎನ್. ಆನೇಕಲ್ | 2,000.00 |
| ರಾಮಣ್ಣ. ಜಿ | 2,000.00 |
| ಎನ್. ಚಂದ್ರಶೇಖರಯ್ಯ | 2,000.00 |
| ಕೆ.ಜಿ. ಸೇತುರಾಮ್ | 2,000.00 |
| ಸಿ. ಕುಮಾರ್ | 2,000.00 |
| ಕೆ.ಸಿ. ನಟರಾಜನ್ | 2,000.00 |
| ರಾಜೇಶ್ವರಿ ರಾಧಾಕೃಷ್ಣ | 2,000.00 |
| ಎಸ್. ರವಿಕುಮಾರ್ | 2,000.00 |
| ನಿತಿನ್ ಭಾಸ್ಕರ್ | 2,000.00 |
| ಸರ್ಜಾಪುರ ಸ್ನೇಹಿತರು | 1,500.00 |
| ವಾಸು ಶ್ರೀನಿವಾಸ್ | 1,200.00 |
| ಮೇಘನಾ ಕುಮಾರಿ | 1,001.00 |
| ಮೈತ್ರಿ ಕುಮಾರಿ | 1,001.00 |
| ಆತ್ರೇಶ ಐಯ್ಯರ್ | 1,001.00 |
| ಮೀರಾ ಕೃಷ್ಣಮೂರ್ತಿ | 1,001.00 |
| ಟಿ.ಎಸ್. ರಮೇಶ್ | 1,001.00 |
| ಉಮಾ ಜಗದೀಶ್ | 1,000.00 |
| ರಮ್ಯಾ ಅಶ್ವತ್ | 1,000.00 |
| ಜಿ.ಎಸ್. ನಾಗರಾಜ್ | 1,000.00 |
| ಎಂ.ಆರ್. ಸೂರ್ಯನಾರಾಯಣ್ | 1,000.00 |
| ಕೆ. ರಾಮಸ್ವಾಮಿ | 1,000.00 |
| ಕೆ.ಸಿ. ಜಯರಾಂ | 1,000.00 |
| ಆರ್. ರಮೇಶ್ | 1,000.00 |
| ಇಂದಿರಮ್ಮ | 1,000.00 |
| ಎಂ.ಆರ್ ಜಯರಾಂ | 1,000.00 |
| ಎಸ್. ವಿಶ್ವನಾಥ್ | 1,000.00 |
| ರವಿ | 1,000.00 |
| ಕುಪ್ಪು | 1,000.00 |
| ಶ್ರೀಮತಿ | 1,000.00 |
| ಛಾಯಪತಿ ಎಸ್. | 1,000.00 |
| ಅಮರ್ | 1,000.00 |
| ಕೃಷ್ಣಸ್ವಾಮಿ | 1,000.00 |
| ಎಚ್.ಕೆ. ರವಿಕಿರಣ್ | 1,000.00 |
| ಎಚ್.ಕೆ. ಶಶಿಧರ್ | 1,000.00 |
| ಎಚ್.ಕೆ. ನಂದಕುಮಾರ್ | 1,000.00 |
| ಆರ್.ಎಸ್. ಭಗವಾನ್ | 501.00 |
| ಎನ್.ಬಿ. ವಿನಯ್ | 501.00 |
| ಜಿ.ವಿ. ಸುಬ್ಬಣ್ಣ | 500.00 |
| ತ್ಯಾಗರಾಜನ್ | 500.00 |
| ಎಚ್. ವಿಶ್ವನಾಥ್ | 500.00 |
| ಮಧುಸೂಧನ್ ಕೆ.ಎಸ್. | 500.00 |
| ಆರ್.ಎನ್. ಹರಿಪ್ರಸಾದ್ | 500.00 |
| ಮಣಿ ರಾಮಯ್ಯ ಕೆ. | 500.00 |

ದಾನಿಗಳಿಗೆ ಸಂಘದ ಅಭಿನಂದನೆಗಳು



# ವೈಕುಂಠವಾಹನ ಕೊಡುಗೆ ಒಂದು ವರದಿ

ನಮ್ಮೆಲ್ಲರ ಬೃಹಚ್ಚರಣ ಸಂಘವು ಈಚೆಗೆ ಹಮ್ಮಿಕೊಂಡು ಕಾರ್ಯಗತಗೊಳಿಸಿದ ವೈಕುಂಠವಾಹನ ಕೊಡುಗೆಯ ಬಗೆಗೆ ಸಂಕ್ಷಿಪ್ತ ವರದಿ ಹಾಗೂ ಒಂದೆರಡು ಅನಿಸಿಕೆಗಳು.

ಸಂಘವು ನಡೆಸಿಕೊಟ್ಟ, ಕನಕಪುರ ರಸ್ತೆಯ ಬಳಿಯಿರುವ ವೈದಿಕ ಧರ್ಮ ಸಹಾಯ ಸಂಘಕ್ಕೆ (ಆರ್ಯಾವರ್ತ ಮತ್ತು ಬ್ರಹ್ಮಾವರ್ತ) ವೈಕುಂಠವಾಹನ ಕೊಡುಗೆಯ ಕಾರ್ಯಕ್ರಮವು ಒಂದು ರೀತಿಯಲ್ಲಿ ವಿಶಿಷ್ಟವಾದದ್ದು.

ಬೃಹಚ್ಚರಣ ಸಂಘವು ಇಡೀ ಬ್ರಾಹ್ಮಣ ಸಮುದಾಯದ ಪ್ರಯೋಜನಕ್ಕಾಗಿ ಈ ಮಟ್ಟದಲ್ಲಿ ಶ್ರಮಿಸಿದುದು ಇದೇ ಮೊದಲು ಎಂದೆನ್ನಬಹುದು.

ಸನಾತನ ಧರ್ಮವು ಪ್ರತಿಪಾದಿಸುವ "ಸರ್ವೇಜನಾ ಸುಖಿನೋಭವಂತು" ಎಂಬ ಪ್ರಾರ್ಥನಾ ಉಕ್ತಿಯನ್ನು ಒಂದು ಸಣ್ಣಮಟ್ಟದಲ್ಲಿಯಾದರೂ ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ಬೃಹಚ್ಚರಣ ಸಂಘವು ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿತು.

ಸಂಘದ ಹಿರಿಯ ಸದಸ್ಯರು, ವಾರ್ಷಿಕ ಸರ್ವ ಸದಸ್ಯರ ಸಭೆಯಲ್ಲಿ ಮಂಡಿಸಿದ ಸೂಚನೆಗೆ ಮನ್ನಣೆ ನೀಡಿ ಅದನ್ನು ಎಲ್ಲ ರೀತಿಯಿಂದಲೂ ಸಮರ್ಪಕವಾಗಿ ಕಾರ್ಯ ರೂಪಕ್ಕೆ ತಂದದ್ದು ಕಾರ್ಯಕಾರಿ ಸಮಿತಿಯ ಹಾಗೂ ಎಲ್ಲ ಸದಸ್ಯರ ಧನಾತ್ಮಕ ಮನೋನೆಲೆಗೆ ಹಿಡಿದ ಕನ್ನಡಿ.

ವೈದಿಕಧರ್ಮ ಸಹಾಯ ಸಂಘದ ಆಡಳಿತವರ್ಗ ನೀಡಿದ ಸಹಕಾರದಿಂದ ವಾಹನದ ಖರೀದಿ, ನೋಂದಣಿ, ಮತ್ತು ಒಳವಿನ್ಯಾಸದಲ್ಲಿನ ಸೂಕ್ತ ಬದಲಾವಣೆಯ ಕಾರ್ಯಗಳು ಸುಲಭವಾದುವಲ್ಲದೇ ಒಟ್ಟು ವೆಚ್ಚದ ಮೇಲೆ ಹಿಡಿತ (ಕಡಿತ) ಸಾಧ್ಯವಾಯಿತು.

ಕಳೆದ ಅಕ್ಟೋಬರ್ 28 ರಂದು ನಗರದ ಬಸವನ ಗುಡಿಯ ಸನ್ನಿಧಿ ರಸ್ತೆಯಲ್ಲಿರುವ ಶ್ರೀ ಮಲ್ಲಿಕಾರ್ಜುನ ಸ್ವಾಮಿ ದೇವಾಲಯದ ಆವರಣದಲ್ಲಿ ಜರುಗಿದ ಈ ಕೊಡುಗೆಯ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿದ್ದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಶ್ರೀ ವೆಂಕಟನಾರಾಯಣ ಅವರ ಸಮಕ್ಷಮದಲ್ಲಿ ವೈದಿಕಧರ್ಮ ಸಹಾಯ ಸಂಘದ ಅಧ್ಯಕ್ಷ ಶ್ರೀ ನರಸಿಂಹಮೂರ್ತಿ ಮತ್ತು ಕಾರ್ಯದರ್ಶಿ ಶ್ರೀ ಭಾಸ್ಕರಮೂರ್ತಿ ಅವರು ನಮ್ಮ ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಸಂಘದ ಹಿರಿಯ ಸದಸ್ಯ ಶ್ರೀ ಬಿ.ಎಸ್. ಪದ್ಮನಾಭ ಅವರಿಂದ ಈ ಕೊಡುಗೆಯನ್ನು ಸ್ವೀಕರಿಸಿದರು. ಈ ಸಂದರ್ಭದಲ್ಲಿ ವೈದಿಕ ಧರ್ಮ ಸಹಾಯ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಈ ಸಮಾರಂಭದಲ್ಲಿ ಹಾಜರಿದ್ದ ಎಲ್ಲರಿಗೂ ತುಳಸಿಯ ಸಸಿಗಳ ವಿತರಣೆ ಇನ್ನೊಂದು ವಿಶೇಷ. ಸಮಾರಂಭದ ಉದ್ದೇಶ, ಗಾಂಭೀರ್ಯತೆಗಳನ್ನು ಗಮನದಲ್ಲಿಟ್ಟುಕೊಂಡು ನಿರ್ಧರಿಸಲಾದ ಈ ವಿತರಣಾ ಕಾರ್ಯ ಸದಸ್ಯರಿಂದ ಬಹುಮಟ್ಟಿಗೆ ಅನುಮೋದನೆಯನ್ನು ಗಳಿಸಿತು. ವಿತರಣೆಗೆ ಮುಂಚೆ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯ ಶ್ರೀ ರವಿಕಿರಣ್ ಅವರು ಸಭೆಗೆ ತುಳಸಿಯ ಮಹತ್ವದ ಬಗ್ಗೆ ತಿಳಿಸಿಕೊಟ್ಟುದು ಸಾಂದರ್ಭಿಕವಾಗಿದ್ದಿತು.

ಸಮಾರಂಭದ ನಂತರ ನೆರೆದಿದ್ದ ಎಲ್ಲರಿಗೂ ಬೃಹಚ್ಚರಣ ಸಂಘದ ವತಿಯಿಂದ ಸರಳ ಭೋಜನದ ವ್ಯವಸ್ಥೆಯಾಗಿತ್ತು.

ಈ ಕೊಡುಗೆಯ ಯೋಜನೆಗೆ ಪ್ರೋತ್ಸಾಹ ಮತ್ತು ನೆರವು ನೀಡಲು ಮುಂದಾಗಿದ್ದುದು ಬೃಹಚ್ಚರಣ ಸಮುದಾಯದ ಸದಸ್ಯರು ಹಾಗೂ ಸಂಘದ ಹಿತೈಷಿಗಳ ಉದಾರ ಮನೋಭಾವಕ್ಕೆ, ಇಡೀ ಬ್ರಾಹ್ಮಣ ಸಮುದಾಯಕ್ಕೇ ಒಳಿತಾಗಲೆಂಬ ಮನೋವೈಶಾಲ್ಯಕ್ಕೆ ಸಾಕ್ಷಿ.

ಸನಾತನ ಧರ್ಮದ ಅಂಗವಾಗಿ ಬೆಳೆದಿರುವ ನಮ್ಮ ಬ್ರಾಹ್ಮಣ ಸಮುದಾಯವು ಪ್ರತಿಪಾದಿಸುವ ಮೌಲ್ಯಗಳ ಉಳಿವು ಮತ್ತು ಏಳಿಗೆಗೆ ನಾವೆಲ್ಲರೂ ಶ್ರಮಿಸಬೇಕಾಗಿರುವ ಈ ದಿನಗಳಲ್ಲಿ ನಮ್ಮ ಬೃಹಚ್ಚರಣ ಸಂಘವು ಕಾರ್ಯಗತ ಗೊಳಿಸಿದ ಈ ಪ್ರಗತಿಪರ ಯೋಜನೆ ನಾವೆಲ್ಲರೂ ಹೆಮ್ಮೆ ಪಡುವ ವಿಷಯ.



◆ **ಬಿ. ಸುಬ್ರಹ್ಮಣ್ಯಂ**
**9449869667**



# ಚಿರಕಾಲ ಸ್ಮರಣೀಯಾಗಿರುವ ವಾಹನದಾನ

ಬೃಹಚ್ಚರಣದ ಒಂದು ವಿಶಿಷ್ಟ ಸುತ್ತ್ಯ ಕಾರ್ಯವಿದು. 1989ರಿಂದ ಇಂದಿನವರೆಗೆ ಮೃತರ ಸಂಸ್ಕಾರದ ನಿಮಿತ್ತ ಗೌರವಕಾರ್ಯ ನಡೆಸುತ್ತಿರುವ ಆರ್ಯಾವರ್ತ ಮತ್ತು ಬ್ರಹ್ಮಾವರ್ತರ ಅಪರಕರ್ಮ ಮತ್ತು ಅಂತ್ಯಕ್ರಿಯೆಯ ವ್ಯವಸ್ಥೆ ಅತ್ಯಂತ ಗಮನಸೆಳೆದಿರುವ ಕಾರ್ಯ. ಮೃತರಿಗೆ ಒಂದು ಸೂಕ್ತ ನಿರ್ಗಮನ ವ್ಯವಸ್ಥೆ ಮಾಡಬೇಕಾದುದು. ಈ ದಿಸೆಯಲ್ಲಿ ಆರ್ಯಾವರ್ತರಲ್ಲಿ 20 ಕೊಠಡಿಗಳ ಸೌಲಭ್ಯ, ಪುರೋಹಿತರ ಕಾರ್ಯತತ್ಪರತೆ. ಅಡಿಗೆಯ ವ್ಯವಸ್ಥೆ ಎಲ್ಲವು ಸುಗಮ. ಕರ್ತೃಗಳ ಅನೇಕ ಸಮಸ್ಯೆಗಳಿಗೆ ಪರಿಹಾರ.

ಈ ಕಾರ್ಯದಲ್ಲಿ ಮೈಸೂರು ಮಂಜಪುತ್ತೂರು ಬೃಹಚ್ಚರಣ ಸಂಸ್ಥೆಯು 28–10–2018ರಂದು ವೈಕುಂಠ ವಾಹನವನ್ನು ಮೇಲಣ ಆರ್ಯಾವರ್ತ ಸಂಸ್ಥೆಯ ಆಡಳಿತ ವರ್ಗದವರಿಗೆ ಹಸ್ತಾಂತರ ಮಾಡಲು ಸಂಜೆ 6.00ರಿಂದ 8.30 ಗಂಟೆಯವರೆಗೆ ಒಂದು ಚೊಕ್ಕ ಕಾರ್ಯಕ್ರಮವನ್ನು ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ನಿಯೋಜಿಸಿತ್ತು. ಕರ್ನಾಟಕ ಬ್ರಾಹ್ಮಣರ ಸಂಘದ ಕೆ.ಎನ್. ವೆಂಕಟನಾರಾಯಣರವರ ಉಪಸ್ಥಿತಿಯಲ್ಲಿ ಬೃಹಚ್ಚರಣ ಸಂಘದ ಅಧ್ಯಕ್ಷ ಸೋಮಸುಂದರರವರು ಆರ್ಯಾವರ್ತಕಕ್ಕೆ ವಾಹನ ನೀಡಿದ ಸೇವೆಯು ಸರ್ವರ ಮೆಚ್ಚುಗೆಗೆ ಕಾರಣವಾಯಿತು. ವೈಕುಂಠ ವಾಹನವು ಮೃತರಿಗೆ ತಡವಿಲ್ಲದೆ ಸದ್ಗತಿಯನ್ನು ನೀಡಲು 24 ಗಂಟೆಗಳ ಕಾಲ ಕಾರ್ಯನಿರತವಾಗಿರುತ್ತದೆ. ಕರ್ತೃಗಳ ಅವಶ್ಯಕತೆಗೆ ತುರ್ತುಪರಿಹಾರ ನೀಡಲು ಬೃಹಚ್ಚರಣರ ಈ ಸಹಾಯ ನಿರಂತರ ಸಹಾಯವಾಗಿ ಉಳಿಯುವುದು ನಿಶ್ಚಿತ. ಅರ್ಚಕದಿಂದ ವಾಹನ ಪೂಜೆ, ವೇದಘೋಷ ಆ ವಾಹನವನ್ನು ಮುಂದಿನ ಕಾರ್ಯಗಳಿಗೆ ತೆರವು ಮಾಡಿದ ನಿಂಬೆಹಣ್ಣಿನ ಬಲಿ, ನಂತರ ವೇದಿಕೆ ಕಾರ್ಯಕ್ರಮ.

ಬೃಹಚ್ಚರಣ ಸಂಸ್ಥೆಯ ಅಧ್ಯಕ್ಷ ಸೋಮಸುಂದರ ಮತ್ತು ಕಾರ್ಯದರ್ಶಿ ವಿ.ಎಸ್. ಮಣಿಯವರಿಂದ ಈ ಪ್ರಯತ್ನದ ಬಗೆಗೆ ವಿವರಣೆ, ಹಣ ಸಂಗ್ರಹಿಸಿದ ರೀತಿ, ಮುಂತಾದವುಗಳ ವಿವರವನ್ನೂ ನೀಡಿದ ಪ್ರಸ್ತಾವನೆಯ ಮಾತುಗಳು ಅವರ ಕರ್ತವ್ಯ ಪ್ರಜ್ಞೆಗೆ ಮುನ್ನುಡಿ. ಆರ್ಯಾವರ್ತ, ಬ್ರಹ್ಮಾವರ್ತದ ನೇತೃತ್ವವನ್ನು ವಹಿಸಿರುವ ವೈದಿಕಧರ್ಮ ಸಹಾಯ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳಾದ ಶ್ರೀ ನರಸಿಂಹಮೂರ್ತಿ ಮತ್ತು ಶ್ರೀ ಭಾಸ್ಕರಮೂರ್ತಿರವರುಗಳು ಸಂಸ್ಥೆಯ ಕಾರ್ಯತತ್ಪರತೆ ರೀತಿ–ನೀತಿಗಳನ್ನು ವಿಸ್ತಾರವಾಗಿ ಸಭೆಗೆ ಪರಿಚಯ ಮಾಡಿದರು. ನಂತರ ಅವರುಗಳು ಸಂಸ್ಥೆಯಲ್ಲಿನ ದಾನ ಯೋಜನೆಗಳ ಬಗೆಗೆ ವಿವರ ನೀಡಿದರು.

ವೈಕುಂಠ ವಾಹನದ ವರ್ಗಾವಣೆ ಕಾರ್ಯವು ಎಲ್ಲರ ಮನದುಂಬಿ ಸಂತಸದ ವಾತಾವರಣ ಮೂಡಿತು. ಬೃಹಚ್ಚರಣರ ಸದಸ್ಯರುಗಳಿಗೆ ಸುತ್ತ್ಯ ಕಾರ್ಯನಿರ್ವಹಿಸಿದ ತೃಪ್ತಿ. ಅಧ್ಯಕ್ಷತೆ ವಹಿಸಿದ್ದ ಶ್ರೀ ಕೆ.ಎನ್. ವೆಂಕಟನಾರಾಯಣ ರವರು ಜೀವನ ಸಾರ್ಥಕತೆಯನ್ನು ಡಿವಿಜಿಯವರ ಮಂಕುತಿಮ್ಮಕಗ್ಗದಲ್ಲಿ ಮೂಡಿಬಂದಿರುವ ರೀತಿಯನ್ನು ತಿಳಿಸಿ, ತನ್ಮೂಲಕ ಸದರಿ ಕಾರ್ಯದ ಬಗೆಗೆ ತಮ್ಮ ಮೆಚ್ಚಿಗೆಯ ಹೂಮಾಲೆಯನ್ನು ತೊಡಿಸಿದರು.

ಈ ಕಾರ್ಯಕ್ರಮದಲ್ಲಿ ಧನ್ಯತೆಯ ಭಾವ ರೂಪು ಗೊಂಡಿದ್ದು, ಜೀವನ ಸಾರ್ಥಕತೆಗೆ ಕೃತ್ಯಕೃತ್ಯತೆ ಮೆರಗು ತುಂಬಿತ್ತು. ಮಹಾಪ್ರಸಾದ ಸೇವನೆಯ ನಂತರ ಈ ಕಾರ್ಯಕ್ರಮ ಒಂದು ಪರಿಪೂರ್ಣತೆಯನ್ನು ಕಂಡಿದ್ದು ಸುತ್ತ್ಯ ಪ್ರಯೋಗ. ಇಂತಹ ಇನ್ನೂ ಅನೇಕ ಸುತ್ತ್ಯ ಯೋಜನೆ ಗಳೊಂದಿಗೆ ಬೃಹಚ್ಚರಣ ಸಂಸ್ಥೆ ಸಾರ್ಥಕ್ಯವನ್ನು ಪಡೆಯಲೆಂಬುದೆ ಸದರಿ ಲೇಖಕನ ಆಶಯ.

◆ ಜಿ.ಎಸ್. ಸತ್ಯಮೂರ್ತಿ
9844469581

## ರಾಜ್ಯೋತ್ಸವ ಪುರಸ್ಕೃತರು



ಪ್ರಸಕ್ತ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿರುವ ಶ್ರೀಯುತ ಎಂ. ಎಸ್. ಪ್ರಭಾಕರ್ ಅವರು ನಮ್ಮ ಸಮುದಾಯದವರು ಎಂಬುದು ಹೆಮ್ಮೆ ಹಾಗೂ ಖುಷಿ ತರುವ ವಿಷಯ. ಈ ಸಂದರ್ಭದಲ್ಲಿ ಅವರಿಗೆ ಸಂಘವು ಶುಭಾಷಯ ಕೋರುತ್ತಾ, ಭಗವಂತನು ಶ್ರೀಯುತರಿಗೆ ಆರೋಗ್ಯ ಹಾಗೂ ನೆಮ್ಮದಿಯನ್ನು ಕರುಣಿಸಲಿ ಎಂದು ಆಶಿಸುತ್ತೇವೆ.

# ಬಂಧುಮಿತ್ರರೊಡನೆ ಹೀಗೊಂದು ಪ್ರವಾಸ

ಸಂಘದಿಂದ ಈ ಬಾರಿ ಒಂದು ದಿನದ ಪ್ರವಾಸದ ಬಗ್ಗೆ ಪ್ರಕಟಣೆ ಬಂದಾಗ ಮಂಡ್ಯ, ಮೈಸೂರು ಪ್ರಾಂತ್ಯಗಳ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಬೇಕೆಂಬ ಅಪೇಕ್ಷೆ ಮತ್ತೆ ಗರಿಗೆದರಿತು. ತಡಮಾಡದೇ ಎರಡು ಸೀಟುಗಳನ್ನು ಕಾದಿರಿಸಿದ್ದಾಯಿತು. ಕಳೆದ ಬಾರಿಗೆ ಹೋಲಿಸಿದಾಗ ಈ ಸಲ ಎರಡೇ ಬಸ್‌ನಷ್ಟು ಜನ ಇರುವ ವಿಷಯ ಮನಸ್ಸನ್ನು ಕೊರೆಯುತ್ತಿರುವಾಗಲೇ ಮನೆಯಿಂದ ಹೊರಟು ನೆಟ್ಟಕಲ್ಲಪ್ಪ ಸರ್ಕಲ್ ತಲುಪಿದೆವು. ಹೊರಡುವ ಸ್ಥಳದಲ್ಲಿ ಸೇರುತ್ತಿದ್ದ ಬಂಧುಮಿತ್ರರೊಡನೆ ಉಭಯಕುಶಲೋಪರಿ, ಸಂಘದ ಕಾರ್ಯಾಧ್ಯಕ್ಷ ಶಶಿಧರ್ ಅವರಿಂದ ಬಸ್‌ಗಳಿಗೆ ಪೂಜಾವಿಧಿ ಇವುಗಳು ನಡೆದಂತೆ ಮನದಲ್ಲಿ ಪ್ರವಾಸದ ಸಡಗರದ ಕಾವು ಏರಿತು!

ಸುಮಾರು ಎಂಟೂಮುಕ್ಕಾಲಿಗೆ ಕಲ್ಲಹಳ್ಳಿಯ (ಸುಮಾರು 800 ವರುಷಗಳಷ್ಟು ಪುರಾತನವಾದ) ವೆಂಕಟರಮಣಸ್ವಾಮಿಯ ದೇವಾಲಯವನ್ನು ತಲುಪಿದೆವು. ಏಕಶಿಲೆಯಲ್ಲಿ ನಿರ್ಮಿಸಲಾಗಿರುವ ಸ್ವಾಮಿಯ ದರ್ಶನ, ಮಂಗಳಾರತಿ, ತೀರ್ಥಪ್ರಸಾದ ಸ್ವೀಕರಣೆಯ ನಂತರ ಹಬೆಯಾಡುತ್ತಿದ್ದ ರುಚಿಕರವಾದ ಬೆಳಗಿನ ಉಪಾಹಾರವನ್ನು ಮುಗಿಸಿದೆವು.

ಮಧ್ಯರಂಗದಲ್ಲಿನ ಶ್ರೀ ರಂಗನಾಯಕಿ ಸಮೇತ ಶ್ರೀ ರಂಗನಾಥ ಸ್ವಾಮಿಯ ಪುಣ್ಯಕ್ಷೇತ್ರದಲ್ಲಿನ ಸ್ಮರಣೀಯ ಅನುಭವವೆಂದರೆ, ಅತಿ ಸನಿಹದಿಂದ ಸ್ವಾಮಿಯ ದರ್ಶನಲಾಭ. ಗರ್ಭಗುಡಿಗಳಲ್ಲಿನ ದೈವ ಸನ್ನಿಧಿಯಲ್ಲಿ ಅನುಭವಕ್ಕೆ ಬರುವ ಮನಃಶಾಂತಿ, ಧನ್ಯತಾಭಾವವನ್ನು ಅನುಭವಿಸಿಯೇ ಅರಿಯಬೇಕು!

ಸನಿಹದಲ್ಲಿಯೇ ನೆಲೆಗೊಂಡಿರುವುದು ಆದಿಶಂಕರ ಭಗವತ್ಪಾದರಿಂದ ಪ್ರತಿಷ್ಠಾಪಿಸಲ್ಪಟ್ಟಿರುವ ಶ್ರೀಪ್ರಸನ್ನ ಮೀನಾಕ್ಷಿ ಸಹಿತ ಶ್ರೀ ಸೋಮೇಶ್ವರ ದೇವಾಲಯ. ಚೋಳರ ಆಳ್ವಿಕೆಯ ಕಾಲದಲ್ಲಿ ನಿರ್ಮಿಸಲ್ಪಟ್ಟಿರುವ ಈ ಕ್ಷೇತ್ರ ವೈಶಾಲ್ಯತೆಯಲ್ಲಿ ಹಾಗೂ ಪ್ರಶಾಂತತೆಯಲ್ಲಿ ವಿಶಿಷ್ಟವಾದದ್ದು. ವಿವಿಧ ತರುಲತೆಗಳ, ವೃಕ್ಷಸಮೂಹದ ಪರಿಸರದ ನಡುವೆ ಇರುವ ಈ ಪುಣ್ಯಕ್ಷೇತ್ರ, ಧ್ಯಾನಕ್ಕೆ, ದೇವರನಾಮ ಸ್ಮರಣೆಗೆ ತುಂಬ ಪ್ರಶಸ್ತವಾದ ಸ್ಥಳ. ನಮ್ಮ ಬಂಧುಮಿತ್ರ ವರ್ಗದಲ್ಲಿನ ಹಲವರು ಶ್ರೀಯುತ ಗೋವಿಂದಪ್ರಸಾದ್, ಅರ್ಜುನ್ ಅವರ ಜೊತೆಗೂಡಿ ಇಲ್ಲಿ ದೇವರನಾಮ ಸಂಕೀರ್ತನೆಯಲ್ಲಿ ಪಾಲ್ಗೊಂಡರು.

ಮಧ್ಯರಂಗದಿಂದ ಹೊರಟು ಅನತಿದೂರದಲ್ಲಿರುವ ಸತ್ತೇಗಾಲದಲ್ಲಿ ನೆಲೆಗೊಂಡಿರುವ, ಶ್ರೀವೈಷ್ಣವರ ಪವಿತ್ರ ಕ್ಷೇತ್ರ ಕೋಟೆ ಶ್ರೀ ವರದರಾಜಸ್ವಾಮಿ ಮತ್ತು ಶ್ರೀ ಪೆರುಂದೇವಿ ಅಮ್ಮನವರ ಸನ್ನಿಧಿಗೆ ಬಂದಿಳಿದೆವು. 13–14ನೇ ಶತಮಾನದಲ್ಲಿ ಶ್ರೀರಂಗಂನಲ್ಲಿ ನೆಲಸಿದ್ದ ಸ್ವಾಮಿ ವೇದಾಂತ ದೇಶಿಕರು ಆ ಸ್ಥಳವು ಅನ್ಯಮತೀಯರ ದಾಳಿಗೊಳಗಾದಾಗ ಕಾವೇರಿ ನದಿಯ ತಟದಲ್ಲಿರುವ ಈ ಪುಣ್ಯಕ್ಷೇತ್ರವನ್ನು ಹನ್ನೆರಡು ವರ್ಷಗಳ ಕಾಲ ತಮ್ಮ ನೆಲೆಯಾಗಿಸಿ ಕೊಂಡರಲ್ಲದೇ ಆ ಸಮಯದಲ್ಲಿ ಅನೇಕ ಗ್ರಂಥಗಳನ್ನು ರಚಿಸಿದರು. ಪ್ರವಾಸ ತಂಡದವರೆಲ್ಲರೂ ಸಾವಧಾನವಾಗಿ ಯಾವುದೇ ಗಡಿಬಿಡಿ ಇಲ್ಲದೇ ಭಗವದ್ ದರ್ಶನ ಮಾಡಿದ ನಂತರ ದೇವಸ್ಥಾನದ ಬದಿಯಲ್ಲಿನ ಭೋಜನ ಶಾಲೆಯಲ್ಲಿ ನಮ್ಮೆಲ್ಲರಿಗಾಗಿ ಮಧ್ಯಾಹ್ನದ ಭೋಜನ ಏರ್ಪಾಡಾಗಿತ್ತು.

ಪ್ರವಾಸವನ್ನು ಆಯೋಜಿಸಿದ ಉಪಸಮಿತಿಯ ಅಚ್ಚುಕಟ್ಟಾದ ವ್ಯವಸ್ಥೆ ಹಾಗೂ ಈ ಕ್ಷೇತ್ರದ ಆಡಳಿತ ಮಂಡಳಿಯ ಧಾರಾಳತನದ ಫಲವಾಗಿ ಪುಷ್ಕಳವಾದ ಮೃಷ್ಟಾನ್ನ ಭೋಜನ ನಮಗಾಗಿ ಕಾದಿತ್ತು. ಶ್ರೀವೈಷ್ಣವರ ಪಾಕ ಕಲೆಯ ಬಗ್ಗೆ ಹೇಳಬೇಕಿಲ್ಲ. ಬಡಿಸಲ್ಪಟ್ಟ ಒಂದೊಂದು ಪದಾರ್ಥವೂ ಉತ್ಕೃಷ್ಟ ರುಚಿಯಿಂದ ಕೂಡಿದ್ದು ನಮ್ಮಲ್ಲಿ ಕೆಲವರಾದರೂ ಬಡಿಸಲ್ಪಟ್ಟ ಪದಾರ್ಥಗಳಿಗೆ ಸರಿಯಾಗಿ ನ್ಯಾಯ ಸಲ್ಲಿಸಿದೆವು!

ಎಲ್ಲರ ಭೋಜನದ ನಂತರ ಬಳಿಯಲ್ಲಿನ ಸಭಾಂಗಣದಲ್ಲಿ ಕೊಂಚ ಹೊತ್ತು ವಿರಮಿಸುವ ಅವಕಾಶ. ಆ ಸಮಯದಲ್ಲಿ, ಆ ಕ್ಷೇತ್ರದ ಆಡಳಿತ ಮಂಡಳಿಯ ಕಾರ್ಯದರ್ಶಿಗಳಾದ ಶ್ರೀ ಸೆಲ್ವನಾರಾಯಣ ಅವರು ನಮ್ಮೆಲ್ಲರನ್ನು ಉದ್ದೇಶಿಸಿ ಸ್ಥಳಪುರಾಣವನ್ನೊಳಗೊಂಡು ಆ ಪುಣ್ಯಕ್ಷೇತ್ರದ ಪರಿಚಯ ಮಾಡಿಕೊಟ್ಟರು. ಪ್ರವಾಸದಲ್ಲಿ ಭಾಗಿಯಾಗಿದ್ದ ಸದಸ್ಯರು ರೂ. 10,001/– ದೇಣಿಗೆಯನ್ನು ಸತ್ಯಗಾಲ ದೇವಾಲಯದ ಅಭಿವೃದ್ಧಿಗಾಗಿ ಸಂಘದ ಮೂಲಕ ನೀಡಿದ್ದು ಶ್ಲಾಘನೀಯ. ನಂತರ ತಂಡದವರು ಕೊಂಚ ಸಮಯವನ್ನು ನಾಮ ಸಂಕೀರ್ತನೆಯಲ್ಲಿ ವಿನಿಯೋಗಿ ಸಿದರು. ಶ್ರೀ ಗೋವಿಂದ್‌ಪ್ರಸಾದ್ ಅವರು ಈ ಸಂದರ್ಭದಲ್ಲಿ ಹಾಡಿದ ಶೇಷಾದ್ರಿ ಗವಾಯಿ ಅವರು ರಚಿಸಿರುವ ಕೃತಿಯನ್ನು ನನ್ನ ಮೆಚ್ಚಿನ ರಾಗದಲ್ಲಿ ಹಾಡಿದುದು, ಶ್ರೀ ಸೆಲ್ವನಾರಾಯಣ ಅವರು ಹಾಡಿದ ಪುರಂದರದಾಸರ ದೇವರನಾಮ ನೆನಪಿನಲ್ಲಿ ಸದಾ ಉಳಿಯುವಂಥದು.

ವಿರಾಮದ ನಂತರ ತಂಡವು ಸನಿಹದಲ್ಲಿ ಹರಿಯುತ್ತಿರುವ ಕಾವೇರಿ ನದಿಯ ತೀರದಲ್ಲಿ ಸ್ವಲ್ಪ ಹೊತ್ತು ಕಳೆಯಿತು.

ಪ್ರತಿ ಸ್ಥಳದಲ್ಲಿಯೂ ಫೋಟೋ ಸೆಶನ್, ಸೆಲ್ಫೀಗಳು ಯಥೇಚ್ಚವಾಗಿ ನಡೆದವು!

ಈ ಪ್ರವಾಸದ ಯಶಸ್ಸಿನ ಬಗ್ಗೆ ಎರಡು ಮಾತಿಲ್ಲ. ನಾನು ಗಮನಿಸಿದಂತೆ ಬಂಧುಮಿತ್ರ ವರ್ಗದವರೆಲ್ಲರೂ ಪ್ರವಾಸದ ಸವಿಯುಂಡರು. ಅರ್ಧಘಂಟೆ ತಡವಾಗಿ ಹೊರಟದ್ದಾಗಲಿ, ಕಲ್ಲಹಳ್ಳಿಯಲ್ಲಿ ಉಪಾಹಾರದ ಸಮಯಕ್ಕೆ ಇದ್ದಿರಬಹುದಾದ ಅನಾನುಕೂಲವಾಗಲಿ, ಮಧ್ಯರಂಗ ಸೇರುವ ಮುಂಚಿನ ಟ್ರಾಫಿಕ್ ಜ್ಯಾಮ್ ಆಗಲಿ ಸಹೃದಯ ಸದಸ್ಯರ ಸಂಭ್ರಮ, ಸಡಗರಗಳಿಗೆ ಅಡ್ಡಿ ಬರಲಿಲ್ಲ. ಪ್ರಯಾಣದುದ್ದಕ್ಕೂ ಹಾಡು, ಹರಟೆ, ಹಾಸ್ಯ, ಸಲ್ಲಾಪಗಳು ನಡೆದೇ ನಡೆದವು! ಪ್ರವಾಸದ ಉಪಸಮಿತಿಯ ಎಲ್ಲ ಸದಸ್ಯರಿಗೆ ಈ ಯಶಸ್ವೀ, ಸ್ಮರಣೀಯ ಪ್ರವಾಸಕ್ಕಾಗಿ ಒಂದು ಹೃತ್ಪೂರ್ವಕ ಥ್ಯಾಂಕ್ಸ್!

ಕೊನೆಗೆ, ರಾತ್ರಿ ವಾಪಸ್ಸು ಬಂದಿಳಿದಾಗ, ಮುಂದಿನ ಪ್ರವಾಸ ಎಂದು, ಎಲ್ಲಿಗೆ ಇರಬಹುದು ಎಂಬ ಯೋಚನೆಯಲ್ಲಿ ಎಲ್ಲರನ್ನೂ ಬೀಳ್ಕೊಂಡು ಮನೆಗೆ ತೆರಳಿದೆವು .........

◆ಬಿ. ಸುಬ್ರಹ್ಮಣ್ಯಂ
**9449869667**

## ಸಂಘದ ಪ್ರವಾಸಗಳ ಹಿನ್ನೋಟ

1. ಅದು ತಾ. 02.10.2013 ರಂದು, ನಮ್ಮ ಸಂಘದ ವತಿಯಿಂದ ಆಯೋಜಿಸಿದ ಮೊಟ್ಟ ಮೊದಲ ಒಂದು ದಿನದ ಪ್ರವಾಸ. ಅಂದು ತಲಕಾಡಿನ ಶ್ರೀ ವೈದ್ಯನಾಥೇಶ್ವರ ಮತ್ತು ತಿರುಮಕೂಡಲು ನರಸೀಪುರದ ಶ್ರೀ ಅಗಸ್ತ್ಯೇಶ್ವರ ದೇವಾಲಯಗಳ ಭೇಟಿ ನೀಡಲಾಗಿತ್ತು.
2. ಎರಡನೇ ವರ್ಷದ ಒಂದು ದಿನದ ಪ್ರವಾಸ ತಾ.21.09.2014 ರಂದು ಕಾವೇರಿ ನದಿ ತೀರದ ರಾಮನಾಥ ಪುರದ ಶ್ರೀ ಸುಬ್ರಹ್ಮಣ್ಯ, ಪಟ್ಟಾಭಿರಾಮ, ಅಗಸ್ತ್ಯೇಶ್ವರ ದೇವಾಲಯಗಳ ದರ್ಶನ.
3. ಮೂರನೆಯ ವರ್ಷ ಪ್ರವಾಸ ತಾ. 02.10.2015 ರಂದು ಮಳ್ಳೂರಿನ ಅಪ್ರಮೇಯ, ಕರಿಘಟ್ಟದ ಶ್ರೀ ಶ್ರೀನಿವಾಸನ ದೇವಾಲಯದ ದರ್ಶನದ ಭಾಗ್ಯ.
4. ನಾಲ್ಕನೇ ವರ್ಷದ ಪ್ರವಾಸ ತಾ.27.11.2016 ರಂದು ಮೇಲುಕೋಟೆಯ ಶ್ರೀ ಚಲುವನಾರಾಯಣನ ದರ್ಶನ.
5. ಐದನೇ ಒಂದು ದಿವಸದ ಪ್ರಯಾಣ ತಾ.19.11.2017ರಂದು ಮುಳಬಾಗಿಲು, ಕುರುಡು ಮಲೆ, ಆವಣಿ ಶೃಂಗೇರಿ ಮಠ, ಗರುಡ ದೇವಾಲಯ, ಶಿವಾಲಯಗಳ ಭೇಟಿ.
6. ಇನ್ನು ಈ ವರ್ಷದ ಪ್ರವಾಸ ತಾ. 25.11.2018 ರಂದು ಕಲ್ಲಹಳ್ಳಿಯ ಶ್ರೀ ಶ್ರೀನಿವಾಸ, ಮಧ್ಯರಂಗದ ಶ್ರೀ ರಂಗನಾಥ ಸ್ವಾಮಿ, ಶ್ರೀ ಮೀನಾಕ್ಷಿ ಸಮೇತ ಸೋಮೇಶ್ವರ ಹಾಗೂ ಸತ್ಯಗಾಲದ ಶ್ರೀ ವರದರಾಜ ಸ್ವಾಮಿಯ ದೇವಾಲಯಗಳ ದರ್ಶನ ಭಾಗ್ಯ ಒದಗಿ ಬಂದಿತು.

ಒಂದು ದಿನದ ಪ್ರವಾಸದ ಮುಖ್ಯ ಉದ್ದೇಶ, ಸಮುದಾಯದ ಕುಟುಂಬದ ಸದಸ್ಯರ ಪುಣ್ಯಕ್ಷೇತ್ರಗಳ ಭೇಟಿಯ ಜೊತೆಗೆ ಸಮುದಾಯದ ಇತರೆ ಕುಟುಂಬದ ಸದಸ್ಯರೊಂದಿಗೆ ಒಂದು ದಿನ ಹೆಚ್ಚುಕಾಲ ಬೆರೆತು ಸಂತೋಷದಿಂದ ಕಾಲ ಕಳೆಯಲಿ, ಸ್ನೇಹ ಸಂಬಂಧಗಳು ಮತ್ತಷ್ಟು ಗಟ್ಟಿಯಾಗಲಿ ಎಂಬುದು.

ಸಂಘದ ಒಂದು ದಿನದ ಪ್ರವಾಸಕ್ಕೆ ಹೆಚ್ಚಿನ ಸ್ಫೂರ್ತಿ, ಶಕ್ತಿ, ನಮ್ಮ ಮಹಿಳಾ ಮಣಿಯರು ಎಂದರೆ ತಪ್ಪಾಗಲಾರದು. ಪ್ರವಾಸದಲ್ಲಿ ಭಾಗವಹಿಸುವ ಸಂಖ್ಯೆಯಲ್ಲಿ ಅವರುಗಳೇ ಅಧಿಕ ಎಂಬುದು ಕಳೆದ ಆರು ವರ್ಷಗಳಲ್ಲಿ ಕಂಡಿದ್ದೇವೆ. ಹಾಗಾಗಿ, ಪ್ರವಾಸದ ಒಂದು ದಿನದ ಮಟ್ಟಿಗಾದರೂ ತಮ್ಮ ಅಡುಗೆಯ ಮನೆಯ ಪಾತ್ರೆ, ಬಾಂಡ್ಲಿ, ಸೌಟು, ಚಾಕು, ಚೂರಿ, ಕತ್ತರಿಗಳಿಗೆ ವಿರಾಮ ಸಿಗಲಿ. ಪ್ರತಿದಿನ ಮನೆಗಳಲ್ಲಿ ಮಹಿಳೆಯರು ಶ್ರಮ ವಹಿಸಿ ಅಡುಗೆ ತಯಾರಿಸಿ, ನಮಗೆ ಉಣಬಡಿಸುವ ಕೆಲಸಕ್ಕೆ ವಿರಾಮ ಕೊಟ್ಟು , ನಾವು ಅವರನ್ನು ಊಟಕ್ಕೆ ಕೂರಿಸಿ, ನಾವೇ ಅವರಿಗೆ ಊಟ ಬಡಿಸಿ ಉಪಚರಿಸುವುದರಲ್ಲಿ ನಮಗೂ ಒಂದು ರೀತಿಯ ಸಂತೋಷ, ಸಡಗರ.

ಸಂಘದ ಕಾರ್ಯಕಾರಿ ಸಮಿತಿಯ ಹಾಗೂ ಉಪಸಮಿತಿಯ ಸದಸ್ಯರು ಪ್ರತಿ ವರ್ಷವೂ ಬಹಳ ಕಾಳಜಿಯಿಂದ ಎಲ್ಲ ರೀತಿಯ ಪೂರ್ವ ತಯಾರಿ ನಡೆಸಿ ಪ್ರವಾಸವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲು ನಮ್ಮ ಸಮುದಾಯದ ಎಲ್ಲ ಸದಸ್ಯರ ಪ್ರೇರಣೆ, ಆಸಕ್ತಿ, ಸಹಕಾರದಿಂದ ಮಾತ್ರ ಎಂಬುದನ್ನು ಸಂಘವು ಮನಗಂಡು, ಸಂತೋಷದಿಂದ ಸ್ವಾಗತಿಸುತ್ತದೆ.

ಧನ್ಯವಾದಗಳೊಂದಿಗೆ,

**ವಿ.ಎಸ್. ಮಣಿ**
**9845055582**

ನಮ್ಮವರು



## ಡಾ॥ ಎಸ್.ಕೆ. ವಿಜಯಲಕ್ಷ್ಮಮ್ಮ

**ಸ**ರ್ಜಾಪುರದ ಕೃಷ್ಣರಾವ್ ಮತ್ತು ಸರಸ್ವತಮ್ಮ ನವರ ಪುತ್ರಿಯಾದ ಡಾ. ಎಸ್.ಕೆ. ವಿಜಯಲಕ್ಷ್ಮಮ್ಮನವರು ಜನಿಸಿದ್ದು 13.10.1929ರಂದು. ಇವರ ಒಡಹುಟ್ಟಿದವರು ಇಬ್ಬರು ಅಣ್ಣಂದಿರು, ಇಬ್ಬರು ತಮ್ಮಂದಿರು ಮತ್ತು ಒಬ್ಬ ತಂಗಿ. ಬಾಲ್ಯದ ದಿನಗಳಲ್ಲಿ ಪ್ರಾಥಮಿಕ ಶಾಲೆಗೆ ಹೋಗದಯೇ ನೇರವಾಗಿ ಮಾಧ್ಯಮಿಕ ಶಾಲೆಗೆ (ಐದನೆಯ ತರಗತಿಗೆ) ಸೇರಿದರೂ ಕೂಡ ವಿದ್ಯಾಭ್ಯಾಸದಲ್ಲಿ ಎಲ್ಲಾ ತರಗತಿಗಳಲ್ಲೂ ಮೊದಲಿಗರಾಗೇ ಇರುತ್ತಿದ್ದರು. ಬಡತನವನ್ನೂ ಒಂದು ಸವಾಲಾಗಿ ಸ್ವೀಕರಿಸಿ ಹೆಣ್ಣುಮಕ್ಕಳು ಹೆಚ್ಚು ಓದದೆ ಇದ್ದ ಆ ದಿನಗಳಲ್ಲೂ ಕೂಡ ಉನ್ನತ ಶಿಕ್ಷಣವನ್ನೇ ಪಡೆದರು. ಯಾವುದೇ ವೃತ್ತಿ ನಿರತ ಶಿಕ್ಷಣಕ್ಕೆ ಒತ್ತು ಕೊಡದೆ ರಾಸಾಯನಿಕ ಶಾಸ್ತ್ರದಲ್ಲಿ ಸಂಶೋಧನೆಯನ್ನು ಆಯ್ದುಕೊಂಡರು.

ಶ್ರೀಮತಿ ವಿಜಯಲಕ್ಷ್ಮಮ್ಮನವರು 1946ರಲ್ಲಿ ಲಂಡನ್ ಮಿಷನ್ ಹೈಸ್ಕೂಲ್‌ನಲ್ಲಿ ಎಸ್.ಎಸ್.ಎಲ್.ಸಿ., 1948ರಲ್ಲಿ ಬೆಂಗಳೂರಿನ ಮಹಾರಾಣೀಸ್ ಕಾಲೇಜ್‌ನಲ್ಲಿ ಇಂಟರ್ ಮೀಡಿಯೇಟ್, 1951ರಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎಸ್ಸಿ. (ಆನರ್ಸ್), 1952ರಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಎಮ್.ಎಸ್ಸಿ. ಮತ್ತು 1967ರಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯಿಂದ ಪ್ರೊ॥ ಆರ್.ಎಸ್. ಸುಬ್ರಹ್ಮಣ್ಯರವರ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪದವಿಯನ್ನು ಗಳಿಸಿದರು.

ವಿದ್ಯಾಭ್ಯಾಸದ ನಂತರ 'ಲೀವ್ ವೆಕನ್ಸಿ' ಅಡಿಯಲ್ಲಿ ಇಂಟರ್‌ಮೀಡಿಯೇಟ್ ಕಾಲೇಜ್ (ಈಗಿನ ಸರ್ಕಾರಿ ಕಲೆ ಮತ್ತು ವಿಜ್ಞಾನ ಕಾಲೇಜ್), ಬೆಂಗಳೂರು, ಮಹಾರಾಣೀಸ್ ಕಾಲೇಜ್, ಬೆಂಗಳೂರು, ಮತ್ತು ಮೌಂಟ್ ಕಾರ್ಮಲ್ ಕಾಲೇಜ್, ಬೆಂಗಳೂರಿನಲ್ಲಿ ಅಧ್ಯಾಪಕ ವೃತ್ತಿ ಜೀವನ ಆರಂಭಿಸಿದರು. ಬೆಂಗಳೂರಿನ ಐ.ಟಿ.ಎಲ್‌ನಲ್ಲೂ ಕಾರ್ಯ ನಿರ್ವಹಿಸಿದರು. ನಂತರದ ದಿನಗಳನ್ನು ಭಾರತದ ಪ್ರಮುಖ ಸಂಸ್ಥೆಯಾದ ಭಾರತೀಯ ವಿಜ್ಞಾನ ಸಂಸ್ಥೆ (ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್)ಯಲ್ಲಿ ರಾಸಾಯನಿಕ ವಿಭಾಗದಲ್ಲಿ ಸಂಶೋಧನ ಕಾರ್ಯದ ಜೊತೆಗೆ ಅನೇಕ ವಿದ್ಯಾರ್ಥಿಗಳು ಪಿಎಚ್.ಡಿ. ಪಡೆಯಲು ಮಾರ್ಗದರ್ಶಿಯಾಗಿದ್ದರು.

ಶ್ರೀಮತಿ ವಿಜಯಲಕ್ಷ್ಮಮ್ಮನವರೊಂದಿಗೆ ವೃತ್ತಿಯಲ್ಲಿ ಜೊತೆಯಾಗಿದ್ದ ಡಾ॥ ರಾಧಾರವರು ಹೇಳುವಂತೆ ವಿಜಯ ಲಕ್ಷ್ಮಮ್ಮನವರು ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ "ಕನ್ಸಲ್‌ಟೇಶನ್ ಫಾರ್ ಎಕ್ಸ್‌ಟ್ರಾಕ್ಟಿಂಗ್ ಗೋಲ್ಡ್ ಅಟ್ ಮೈಕ್ರೋ ಲೆವೆಲ್ ಪ್ರಾಜೆಕ್ಟ್ ಆಫ್ ಗೌರ್ನಮೆಂಟ್ ಆಫ್ ಇಂಡಿಯಾ"ದಲ್ಲಿ ಸೇವೆ ಸಲ್ಲಿಸಿದ್ದರು. ಯಾವುದೇ ಪದಾರ್ಥವನ್ನು ಪೂರ್ಣವಾಗಿ ಬಳಸಬೇಕು ಮತ್ತು ಕಚ್ಚಾವಸ್ತು ಹಾಳಾಗಬಾರದು ಎಂಬ ಸದುದ್ದೇಶದಿಂದಲೇ ಈ ಕಾರ್ಯವನ್ನು ತೆಗೆದುಕೊಂಡು, ಅತೀ ಕಡಿಮೆ ಖರ್ಚಿನಲ್ಲಿ ಬಂಗಾರವನ್ನು ಹೆಚ್ಚಾಗಿ ಹೊರತೆಗೆಯುವುದರಲ್ಲಿ ಯಶಸ್ಸು ಗಳಿಸಿದ್ದರು. ಬೆಳ್ಳಿಯನ್ನು ಕೂಡ "ಕಸದಿಂದ ರಸ" ಎನ್ನುವಂತೆ ಹಳೇ ರೇಷ್ಮೆ ಬಟ್ಟೆಯಿಂದ ಹೊರತೆಗೆಯುತ್ತಿದ್ದರು. ಛಾಯಾಚಿತ್ರಣ ಸಂಸ್ಕರಣೆ ಕ್ಷೇತ್ರದಲ್ಲೂ ದುಡಿದು ಅಲ್ಲಿ ತಮ್ಮಲ್ಲಿದ್ದ ಚಾತುರ್ಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿದ್ದರು.

ಹಾಗೆಯೇ 1983ರಲ್ಲಿ ಶ್ರೀಲಂಕಾ ಮತ್ತು ಕೆನಡಾಗಳಿಗೆ ಭಾರತೀಯ ವಿಜ್ಞಾನ ಸಂಸ್ಥೆಯಿಂದ ಪ್ರತಿನಿಧಿಯಾಗಿ ತೆರಳಿ ಒಳ್ಳೆಯ ಹೆಸರು ಸಂಪಾದಿಸಿದ್ದರು. ಸೇವೆಯಿಂದ ಸ್ವಯಂ ನಿವೃತ್ತಿಯಾಗುವವರೆಗೂ ಐ.ಐ.ಎಸ್.ಸಿ.ನಲ್ಲೇ ಇದ್ದು ನಿವೃತ್ತಿಯ ನಂತರವೂ ವಿಜ್ಞಾನ ಕ್ಷೇತ್ರದಲ್ಲಿರುವ ಆಸಕ್ತಿಯಿಂದ ಎಲೆಕ್ಟ್ರೋಕೆಮಿಕಲ್ ಸೊಸೈಟಿ ಜರ್ನಲ್‌ನಿಂದ ಹೊರಬರುತ್ತಿದ್ದ ಪತ್ರಿಕೆಗೆ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದರು.

ಶ್ರೀಮತಿ ವಿಜಯಲಕ್ಷ್ಮಮ್ಮನವರು ವೃತ್ತಿ ಜೀವನದಲ್ಲೇ ಅಲ್ಲದೆ ತಮ್ಮ ಬದುಕಿನುದ್ದಕ್ಕೂ ಯಾವುದೇ ಕಾರ್ಯ ನಿರ್ವಹಿಸಿದರೂ ಅದನ್ನು ಅತ್ಯಂತ ಶ್ರದ್ಧೆಯಿಂದ, ಅದರ ಪೂರ್ಣಜ್ಞಾನದೊಂದಿಗೆ ಮಾಡುತ್ತಿದ್ದರು. ತಮ್ಮಲ್ಲಿರುವ ಪದಾರ್ಥಗಳನ್ನು ಉತ್ತಮವಾಗಿ ಬಳಸಿ ಅದರಿಂದ ಯಾವಾಗಲೂ ಲೋಕೋಪಯೋಗಿಯಾದ ಕೆಲಸಗಳನ್ನು ತತ್ಪರತೆಯಿಂದ ಮಾಡುತ್ತಿದ್ದರು. ಪ್ರಕೃತಿಯಿಂದ ದೊರಕುವ ನೈಸರ್ಗಿಕ ವಸ್ತುಗಳನ್ನು ಸದ್ವಿನಿಯೋಗ ಮಾಡುವ ಉದ್ದೇಶ ದಿಂದ ತಮ್ಮಲ್ಲಿಗೆ ಬರುವ ಆಸಕ್ತರಿಗೆ ಅದರ ವಿಷಯಗಳನ್ನು ವಿಷದವಾಗಿ ತಿಳಿಸಿಕೊಡುತ್ತಿದ್ದರು ಮತ್ತು ಪ್ರಾಯೋಗಿಕ ಬಳಕೆಯನ್ನು, ಅದರ ಬಗ್ಗೆ ಶಿಕ್ಷಣವನ್ನು ತುಂಬಾ ಪ್ರೀತಿ ಯಿಂದ ನೀಡುತ್ತಿದ್ದರು.

ಗಿಡ ಬೆಳೆಸುವ ಹವ್ಯಾಸವನ್ನು ಹೊಂದಿದ್ದ ಶ್ರೀಮತಿ ವಿಜಯಲಕ್ಷ್ಮಮ್ಮನವರು ಮನೆಯಲ್ಲಿ ಹಳೆಯ ಬಳಕೆಯಾಗದ ಡಬ್ಬ, ಬಕೆಟ್, ಕವರ್, ಸಿಮೆಂಟ್ ಚೀಲ ಮುಂತಾದವು ಗಳಲ್ಲೇ ತರಕಾರಿ, ಹೂವು, ಪತ್ರೆ, ಹಣ್ಣುಗಳನ್ನು ಬೆಳೆಸಿ ಅದಕ್ಕೆ ಮನೆಯ ತ್ಯಾಜ್ಯದಿಂದಲೇ ಸಾವಯವ ಗೊಬ್ಬರವನ್ನು ತಯಾರಿಸುತ್ತಿದ್ದರು. ಅಂಗಳದಲ್ಲಿ ಸದಾ ಬಣ್ಣಬಣ್ಣದ ಹೂವುಗಳು ನಳನಳಿಸುತ್ತಿದ್ದುದನ್ನು ಕಂಡು

ಆನಂದಿಸುತ್ತಿದ್ದರು. ಅವರ ಕೈತೋಟವನ್ನು ನೋಡಿ ಆನಂದಿಸುತ್ತಿದ್ದ ಆಸಕ್ತರಿಗೆ ಗಿಡಗಳನ್ನು ಕೊಡುತ್ತಿದ್ದರು.

ಸೌರಶಕ್ತಿಯ ಬಳಕೆಯ ಬಗ್ಗೆ ತೀವ್ರ ಕಳಕಳಿ ಇದ್ದುದರಿಂದ ಮತ್ತು ವಿದ್ಯುತ್ ಬಳಕೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಸೌರಶಕ್ತಿಯ ಬಳಕೆ ಬಂದ ಹೊಸದರಲ್ಲೇ ತಮ್ಮ ಮನೆ, ಸಂಬಂಧಿಗಳ ಮನೆ, ರಾಮಕೃಷ್ಣ ಸ್ಟೂಡೆಂಟ್ ಹೋಮ್, ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ ಮತ್ತು ಅಧ್ಯಾತ್ಮ ಪ್ರಕಾಶ ಕಾರ್ಯಾಲಯಗಳಿಗೆ ದೀಪ, ಬಿಸಿನೀರು ಮತ್ತು ಇನ್ನಿತರ ಸೌಲಭ್ಯಗಳನ್ನು ಒದಗಿಸಿ ಕೊಟ್ಟರು. ಮಳೆ ನೀರು ಕೊಯ್ಲು ವ್ಯವಸ್ಥೆಯನ್ನೂ ತಮ್ಮ ಮನೆಗೆ, ಸಂಬಂಧಿಗಳ ಮನೆಗೆ, ರಾಮಕೃಷ್ಣ ಸ್ಟೂಡೆಂಟ್ ಹೋಮ್ ಮತ್ತು ಅಧ್ಯಾತ್ಮ ಪ್ರಕಾಶ ಕಾರ್ಯಾಲಯಗಳಿಗೆ ಅಳವಡಿಸಿರುವ ವಿಜಯಲಕ್ಷ್ಮಮ್ಮನವರು ಎಲ್ಲರಿಗೂ ಮಾದರಿಯಾಗಿದ್ದಾರೆ.

ಇದಲ್ಲದೆ ಕರಕುಶಲ ಕಲೆಗಳಲ್ಲೂ ಆಸಕ್ತಿ ಇದ್ದ ವಿಜಯ ಲಕ್ಷ್ಮಮ್ಮನವರು ಹೊಲಿಗೆ, ನಿಟ್ಟಿಂಗ್, ಕ್ರೋಶಾ, ಟ್ಯಾಟಿಂಗ್, ಪೈಂಟಿಂಗ್, ಕಸೂತಿ, ಕಟ್‌ವರ್ಕ್, ಕ್ರಾಸ್‌ಸ್ಟಿಚ್ ಇನ್ನೂ ಹಲವಾರು ನಾಜೂಕು ಕೆಲಸಗಳನ್ನು ಮಾಡುವುದರಲ್ಲಿ ತಮ್ಮ ಬಿಡುವಿನ ಸಮಯವನ್ನು ಸಂತೋಷದಿಂದ ಕಳೆಯುತ್ತಿದ್ದರು. ತಮಗೆ ತಿಳಿದಿಲ್ಲದ ವಿಷಯಗಳನ್ನು ಕಲಿಯುವ ಬಯಕೆಯುಳ್ಳವರಾಗಿ ತಮಗಿಂತ ಕಿರಿಯರಿಂದಲೂ ಹೊಸ ಹೊಸದನ್ನು ಕಲಿಯುತ್ತಿದ್ದರು.

ಸಮಾಜದಿಂದ ಅನುಕೂಲ ಪಡೆದು ಮತ್ತೆ ಸಮಾಜಕ್ಕೆ ಅದನ್ನು ತಿರುಗಿ ಕೊಡುವ ಸನ್ಮಾರ್ಗದಲ್ಲಿದ್ದ ವಿಜಯ ಲಕ್ಷ್ಮಮ್ಮನವರು ಅವಶ್ಯಕತೆ ಇರುವವರಿಗೆ ಹೇರಳವಾಗಿ ಸಹಾಯ ಹಸ್ತ ನೀಡಿದ್ದರು. ಆದರೆ ಯಾರಿಗೂ ಈ ವಿಷಯ ತಿಳಿಯದ ಹಾಗೆ ಎಚ್ಚರ ವಹಿಸುತ್ತಿದ್ದರು.

ಸಂಗೀತ, ಸಾಹಿತ್ಯ ಅಲ್ಲದೆ ಅಧ್ಯಯನದಲ್ಲಿ ಹವ್ಯಾಸ ಇದ್ದ ಮತ್ತು ಸರ್ವಗ್ರಾಹಿಯಾದ ವಿಜಯಲಕ್ಷ್ಮಮ್ಮನವರು ಮನೆಯಲ್ಲಿ ಸಾಕಷ್ಟು ಪುಸ್ತಕಗಳೊಂದಿಗೆ ವಾಚನಾಲಯವನ್ನು ಮಾಡಿಕೊಂಡಿದ್ದರು. ಆಸಕ್ತರಿಗೆ ಓದಲೂ ಕೊಡುತ್ತಿದ್ದರು.

ತಮ್ಮ ಕಡೆಯ ದಿನಗಳಲ್ಲೂ ಅತೀವ ನಿಶ್ಶಕ್ತಿ ಯಿದ್ದಾಗಲೂ ಕುಳಿತಲ್ಲೇ ಕರಕುಶಲ ವಸ್ತುಗಳನ್ನು ಮಾಡಿ ಪ್ರೀತಿಪಾತ್ರರಿಗೆ ಉಡುಗೊರೆಯಾಗಿ ಕೊಡುತ್ತಿದ್ದರು. ದಿನಾಂಕ 6.6.2018ರಂದು ನಮ್ಮನ್ನಗಲಿದ ಈ ಹಿರಿಯ ಚೇತನವು 88 ವರ್ಷಗಳ ಸಾರ್ಥಕ, ಸಂತೃಪ್ತ ಜೀವನವನ್ನು ನಡೆಸಿದರು. ಮರಣಾನಂತರವೂ ವೈದ್ಯಕೀಯ ಸಂಶೋಧನೆಗಾಗಿ ತಮ್ಮ ದೇಹವನ್ನು ದಾನ ಮಾಡಿದ್ದರು.

**ಜಗವೆಲ್ಲ ನಗುತಿರಲಿ,**
**ಜಗದಳುವು ನನಗಿರಲಿ!**
**ನಾನಳಲು ಜಗವೆನ್ನನೆತ್ತಿಕೊಳದೆ?**
**ನಾ ನಕ್ಕು, ಜಗವಳಲು ನೋಡಬಹುದೇ?**

ಎನ್ನುವಂತೆ ಸಜ್ಜನರು ಎಲ್ಲಾ ಕಾಲದಲ್ಲೂ ಇರುತ್ತಾರೆ. ಅಂತಹವರಲ್ಲಿ ವಿಜಯಲಕ್ಷ್ಮಮ್ಮನವರು ಒಬ್ಬರು ಎಂದು ಅವರನ್ನು ಹತ್ತಿರದಿಂದ ಕಂಡಿದ್ದ ನನಗೆ ತಿಳಿಸಲು ಹೆಮ್ಮೆಯಾಗುತ್ತದೆ. ಪ್ರಾಪಂಚಿಕ ವಸ್ತು ಪ್ರಪಂಚದಲ್ಲಿ ನಿರಾಸಕ್ತಿ ಇಲ್ಲದೆ ಅನಾಸಕ್ತಿ ಹೊಂದಿದ್ದ ವಿಜಯಲಕ್ಷ್ಮಮ್ಮ ನವರು ಜೀವನೋತ್ಸಾಹದಿಂದಲೇ ಇದ್ದುದು ಈಗಿನ ಯುವ ಪೀಳಿಗೆಗೆ ಮಾದರಿಯಾಗಿದೆ.



◆ **ಆರ್.ರಮೇಶ್**
**9886034048**

## ವಿದೇಶ ಪ್ರಯಾಣ



ಸಂಘದ ಸದಸ್ಯ ಶ್ರೀ ಅರುಣ್ ಜೆ. ಕಾರ್ತಿಕ್ (ಸಂಘದ ಸದಸ್ಯ ಶ್ರೀ ಕೆ.ಸಿ. ಜಯರಾಂ ಹಾಗೂ ಶ್ರೀಮತಿ ನಳಿನಿ ಅವರ ಪುತ್ರ) ಕಂಪ್ಯೂಟರ್ ಸೈನ್ಸ್‌ನಲ್ಲಿ ಉನ್ನತ ವ್ಯಾಸಂಗಕ್ಕಾಗಿ ಅಮೆರಿಕಾದ ಚಿಕಾಗೋನಲ್ಲಿರುವ ಇಲಿನಾಯ್ ಇನ್ಸಿಟಿಟ್ಯೂಟ್ ಆಫ್ ಟೆಕ್ನಾಲಜಿಗೆ ಹೋಗಿರುತ್ತಾರೆ.

***ಶ್ರೀಯುತ ಅರುಣ್ ಜೆ. ಕಾರ್ತಿಕ್‌ಗೆ***
***ಸಂಘ ಶುಭ ಹಾರೈಸುತ್ತದೆ.***

## ಗೃಹಪ್ರವೇಶ

ಸಂಘದ ಸದಸ್ಯರಾದ ಶ್ರೀ ಬಾಲಸುಬ್ರಹ್ಮಣ್ಯಂ ಹಾಗೂ ಶ್ರೀಮತಿ ಶ್ರೀದೇವಿಯವರ ನೂತನ ಮನೆ ಗೃಹಪ್ರವೇಶವು 19.9.2018ರಂದು ಬೆಂಗಳೂರಿನ ಕಾಳಿದಾಸ ಲೇಔಟ್‌ನಲ್ಲಿ ನೆರವೇರಿತು.

***

ಸಂಘದ ಸದಸ್ಯೆ ಶ್ರೀಮತಿ ಸುನಂದಾ ಹಾಗೂ ಶ್ರೀ ಗೋವಿಂದರಾಜ್‌ರವರ ನೂತನ ಮನೆ ಗೃಹಪ್ರವೇಶವು ನವೆಂಬರ್ 15, 2018ರಂದು ಮೈಸೂರಿನಲ್ಲಿ ನೆರವೇರಿತು.

# ಮಂಕುತಿಮ್ಮನ ಕಗ್ಗ – ತಾತ್ಪರ್ಯ



**ಸ್ಮಿತವಿರಲಿ ವದನದಲಿ ಕಿವಿಗೆ ಕೇಳಿಸದಿರಲಿ**
**ಹಿತವಿರಲಿ ವಚನದಲಿ ಋತವ ಬಿಡದಿರಲಿ**
**ಮಿತವಿರಲಿ ಮನಸಿನುದ್ವೇಗದಲಿ,**
**ಭೋಗದಲ್ಲಿ ಅತಿ ಬೇಡವೆಲ್ಲಿಯು "ಮಂಕುತಿಮ್ಮ"**

ನಮ್ಮ ಮುಖದಲ್ಲಿ ಸರ್ವದಾ ಮಂದಹಾಸ ತುಂಬಿ ತುಳುಕುತ್ತಿರಬೇಕು. ಅಟ್ಟಹಾಸದ ನಗುವಿನಿಂದ ಬೇರೆಯವರನ್ನು ಅಲಕ್ಷಿಸಕೂಡದು. ನಮ್ಮ ನಗುವು ಬೇರೆಯವರ ಕಿವಿಗೆ ಅಪ್ಪಳಿಸದಿರಲಿ. ನಮ್ಮ ಮಾತಿನಲ್ಲಿ ನಯ, ಪ್ರೀತಿ ಇರಲಿ. ಪರರಿಗೆ ಆಪ್ಯಾಯಮಾನವಾಗಿರಲಿ, ಹಿತವಾಗಿರಲಿ, ನೋವನ್ನುಂಟು ಮಾಡದಿರಲಿ. ಸತ್ಯವನ್ನು ಬಿಡದಿರಲಿ, ಅತಿಭೋಗದಲ್ಲಾಗಲೀ ಉದ್ವೇಗದಲ್ಲಾಗಲೀ ನಾವು ಮೈಮರೆಯುವುದೇ ಹೆಚ್ಚು. ಪರರಿಗೆ ಹಿಂಸಿಸುವುದೇ ಹೆಚ್ಚು. ಆದ್ದರಿಂದ ಯಾವುದರಲ್ಲಿಯೂ ಅತಿ ಬೇಡ ಎಂದಿದ್ದಾರೆ ಡಾ. ಡಿ.ವಿ.ಜಿ.

ಇದರ ಮುಖ್ಯ ಉದ್ದೇಶ ಸಮಾನತೆ, ಸಮದರ್ಶಿತ್ವ, ಶಾಂತಿ, ಸಮಾಧಾನಗಳು ಬದುಕಿಗೆ ಅವಶ್ಯ ಎಂಬುದಾಗಿದೆ. ಶ್ರೀಕೃಷ್ಣ ಪರಮಾತ್ಮ ಭಗವದ್ಗೀತೆಯಲ್ಲಿ ಏನೇ ದ್ವಂದ್ವಗಳು ಬಂದರೂ ಅವನ್ನು ಸಮಾನತೆಯಿಂದ ಸ್ವೀಕರಿಸಬೇಕು ಎಂದು ತಿಳಿಸಿದ್ದಾನೆ. ಸಂವತ್ಸರದ ಮೊದಲನೇ ಹಬ್ಬವಾದ ಯುಗಾದಿಯಲ್ಲೂ ಸಹ ಇದೇ ಸಂಕೇತವಿದೆ. ಉದಾಹರಣೆಗೆ: ಬೇವು–ಬೆಲ್ಲ, ಸಿಹಿ–ಕಹಿ.

ಮಾವಿನ ಬೇವಿನ ತೋರಣ ಕಟ್ಟು... ಬೇವು ಬೆಲ್ಲಗಳ ಒಟ್ಟಿಗೆ ಕುಟ್ಟು, ಜೀವನವೆಲ್ಲಾ ಬೇವು ಬೆಲ್ಲ, ಎರಡೂ ಸವಿವನೆ ಕಲಿ ಮಲ್ಲ ಎಂದಿದ್ದಾರೆ ಕು.ವೆಂ.ಪು. ಆದುದರಿಂದ ಬದುಕು ಹಸನಾಗ ಬೇಕಾದರೆ ಸಮದರ್ಶಿತ್ವವೇ ಮುಖ್ಯ. ನಮ್ಮ ನಡೆನುಡಿಗಳು ಮಿತವಾಗಿದ್ದರೆ ಅದೇ ಗುಣಗಳ ಸಾರ್ಥಕತೆಗೆ ದಾರಿ ಆಗುತ್ತದೆ.

ಮುಖ, ಮನುಷ್ಯನ ಮನಸ್ಸಿಗೆ ಹಿಡಿದ ಕೈಗನ್ನಡಿ. ನಮ್ಮ ಮನಸ್ಸನಲ್ಲಿ ಆಗುವ ವಿವಿಧ ಭಾವನೆಗಳನ್ನು ಅನುಸರಿಸಿ ಮುಖದ ಚಹರೆ ಬದಲಾಗುತ್ತದೆ. ಮುಖದಲ್ಲಿ ಮಂದಹಾಸ ಮುಗುಳ್ನಗೆ ಇರಬೇಕು ನಿಜ. ಆದರೆ, ಮನಸ್ಸಿಗೆ ಕ್ಲೇಷ? ವೇದನೆ, ಅತೃಪ್ತಿ ಮುಂತಾದ ನಕಾರಾತ್ಮಕ ಭಾವನೆಗಳಿದ್ದಾಗ ಅವು ಪ್ರಕಟವಾಗುವುದೇ ಬೇರೆ ರೀತಿಯಲ್ಲಿ. ನಾವು ಸಂಘಜೀವಿಗಳಾಗಿರುವುದರಿಂದ ನಮ್ಮ ವರ್ತನೆ ಪ್ರತಿಫಲಿಸುವುದರಿಂದ ನಕಾರಾತ್ಮಕ ಭಾವನೆಗಳನ್ನು ತಡೆಯಬೇಕು. ಅಟ್ಟಹಾಸದಿಂದ ನಕ್ಕು, ಪರರನ್ನು ಅವಹೇಳನ ಮಾಡುವ ಅಥವಾ ದರ್ಪದಿಂದ ವರ್ತಿಸಿ ಅವರಿಗೆ ಅವಮಾನ ಮಾಡಬಾರದು. ನಾವು ನಗುವನ್ನು ಹಂಚಬೇಕೇ ಹೊರತು ನೋವನ್ನಲ್ಲ ಎಂಬುದನ್ನು ಅರಿತು ಅದಕ್ಕೆ ತಕ್ಕಂತೆ ನಡೆಯಬೇಕು, ಪರಿಸರವನ್ನು ಸಂತೋಷವಾಗಿಡಬೇಕು.

ಮುಂದೆ ಈ ಮುಕ್ತಕದಲ್ಲಿ ಡಿ.ವಿ.ಜಿ. ಹೀಗೆಂದಿದ್ದಾರೆ "ಮಾತಿನಲ್ಲಿ ನಯವಿರಲಿ ಹಿತವಿರಲಿ. ಆಪ್ಯಾಯಮಾನವಾಗಿರಲಿ". ಸಂಸ್ಕೃತದಲ್ಲಿ 'ವಚನೇಕಾ ದರಿದ್ರತಾ' ಎಂಬ ಸುಭಾಷಿತವಿದೆ. 'ಒಬ್ಬರ ಮನಸ್ಸನ್ನು ಸಂತೋಷಪಡಿಸುವ ಮಾತು ಇದ್ದರೆ ಅದಕ್ಕೆ ದರಿದ್ರ ಯಾಕೆ... ಬಡತನ ಯಾಕೆ ಎಂಬರ್ಥ ಕೊಡುತ್ತದೆ ಈ ಸುಭಾಷಿತ. ಇನ್ನೊಬ್ಬರಿಗೆ ನೋವಾಗದ ರೀತಿಯಲ್ಲಿ ಸಂತಸವನ್ನು ಉಂಟು ಮಾಡುವ ರೀತಿಯಲ್ಲಿ ಮಾತನಾಡಬೇಕು. ಆದರೆ ಸತ್ಯ (ಋತವ ಬಿಡದಿರಲಿ) ಮತ್ತು ಧರ್ಮದ ಚೌಕಟ್ಟನ್ನು ಮೀರಬಾರದು. ಉದಾಹರಣೆಗೆ: ಧರ್ಮರಾಯ, ಸತ್ಯ ಹರಿಶ್ಚಂದ್ರ, ಧರ್ಮದ ಮೂರ್ತಿಯೇ ಆದ ಶ್ರೀ ರಾಮಚಂದ್ರ, ಅಹಿಂಸಾತತ್ವದಿಂದ ಹೋರಾಡಿದ ಮಹಾತ್ಮಾ ಗಾಂಧೀಜಿ ಇವರುಗಳು ಮಾದರಿಯಾಗಿ ನಿಲ್ಲುತ್ತಾರೆ.

ನಮಗೆ ತೊಂದರೆಯಾದಾಗ, ಅನ್ಯಾಯವಾದಾಗ ಮನಸ್ಸು ಮುಗಿಲೆದ್ದು ಕೋಪಾವಿಷ್ಟರಾಗಿ ಉದ್ವೇಗದಿಂದ ಮತಿಹೀನರಾಗಿ ಅರಚಾಡುತ್ತಾ, ಪರರನ್ನು ನೋಯಿಸುವುದು ಅಕ್ಷಮ್ಯ ಅಪರಾಧ. ಇಂದ್ರಿಯ ಪ್ರಾಬಲ್ಯಕ್ಕೆ ನಾವು ದಾಸರಾಗಿ ಕುರುಡಾಗಿರುತ್ತೇವೆ. ಅದು ಅವಿವೇಕಕ್ಕೆ ದಾರಿ ಮಾಡಿಕೊಡುತ್ತದೆ. ವಿವೇಕದಿಂದ ವರ್ತಿಸಿದಾಗ, ಮನಸ್ಸು ಉನ್ನತಿಯ ಮಾರ್ಗದಲ್ಲಿ ಹೋಗುತ್ತದೆ. ಅದನ್ನೇ ಡಿ.ವಿ.ಜಿ.ಯವರು 'ಅತಿ ಬೇಡ ಎಲ್ಲಿಯೂ' ಎಂದಿದ್ದಾರೆ.

ಮುಂದಿನ ಮಸ್ತಕದಲ್ಲಿ 'ನಿನ್ನ ಅಂತರಂಗದ ನೆಮ್ಮದಿಯನ್ನು ಬಿಡಬೇಡ. ಅದು ಏನೇ ಆಗಲಿ' ಎಂದಿದ್ದಾರೆ. ಸಪ್ತಸಮುದ್ರಗಳು ಒಂದಾಗಿ ಭೋರ್ಗರೆಯುತ್ತಾ, ನೆರೆಯಿಂದ ಹಾವಳಿ ಮಾಡುತ್ತಾ ಪ್ರಳಯದೇವನಾಗಿ ಮಾರಣಹೋಮ ಮಾಡಲಿ ಅಥವಾ ಅತ್ಯಂತ ತಾಪದ ಫಲವಾಗಿ ಭೂಮಿ ಬೆಂದು ಹಬೆ ಮೇಲೆದ್ದು ಪ್ರಪಂಚವನ್ನು ಬೇಯುವಂತೆ ಮಾಡಲಿ. ಏನಾದರಾಗಲಿ... ನೀನು ಗಾಬರಿ ಆಗದೆ ಒಳನೆಮ್ಮದಿಯನ್ನು ಬಿಡದೆ ಇರು. ಪ್ರತಿಯೊಂದಕ್ಕೂ ಒಂದು ಸಮಯ ಇದ್ದೇ ಇದೆ. ಸಮುದ್ರದ ನೆರೆ ತಗ್ಗುತ್ತದೆ. ಭೂಮಿಯಿಂದ ಎದ್ದ ಹಬೆ ಧೂಳು ತಣ್ಣಗಾಗುತ್ತದೆ. ಇದು ಪ್ರಕೃತಿ ನಿಯಮ, ನಾವು ತಲೆಬಾಗಲೇಬೇಕು. ಎದುರಾಡಲು ಸಾಧ್ಯವೇ ಇಲ್ಲ. ಇದುವೇ ದೈವತಂತ್ರ. ಅವನ ಕ್ರಿಯೆ ಹೊರತು ಅಸಾಧ್ಯವನ್ನು ಸಾಧ್ಯ ಮಾಡಲು ಆಗುವುದಿಲ್ಲ. ಇವೆಲ್ಲದರ ನಡುವೆಯೂ ಅಂತರಂಗದಲ್ಲಿ ನೆಮ್ಮದಿಯಿಂದಿರುವುದು ಒಂದು ತಪಸ್ಸು.

ನಂತರದ ಮಸ್ತಕದಲ್ಲಿ ಇನ್ನೂ ಕೆಲವು ವಿಚಾರಗಳನ್ನು ತಿಳಿಸಿದ್ದಾರೆ. 'ಮನಸ್ಸಿಗೆ ನೆಮ್ಮದಿ ಹೇಗೆ ಸಾಧ್ಯ. ನಮ್ಮ ಸುತ್ತಮುತ್ತಲಿನಲ್ಲಿರುವವರು ಹೇಗೆ ಹೇಗೋ ನಡೆದುಕೊಳ್ಳುತ್ತಾರೆ. ಅಹಿತವಾದ ನಡೆ–ನುಡಿಗಳಿಂದ ವರ್ತಿಸುತ್ತಾರೆ ಎಂಬ ಪ್ರಶ್ನೆಗೆ, ಜನರು ಹೇಗಾದರೂ ನಡೆಯಲಿ. ನಾವು ಮಾತ್ರ ಉದ್ವಿಗ್ನರಾಗದೆ ಅಂತರಂಗದಲ್ಲಿ ನಗುತ್ತಿರಬೇಕು' ಎನ್ನುತ್ತಾರೆ ಡಿ.ವಿ.ಜಿ.

ಅದರಂತೆ ನೀನು ಜಗತ್ತಿನಲ್ಲಿ ದುಡಿಯುವಾಗ, ನೋವನ್ನು ಅನುಭವಿಸುವಾಗ, ನಿನ್ನ ತುಟಿಯನ್ನು ಬಿಗಿದಿಡು. ಸಹನೆಯಿಂದ ಇರುವುದೇ ನಿನ್ನ ಕರ್ತವ್ಯ. ಹೀಗೆ ಈ ಜಗತ್ತೆಂಬ ಜೀವಲೋಕದಲ್ಲಿ ಎಲ್ಲರೊಡನೆಯೂ ಸಮನಾಗಿ ವರ್ತಿಸಿ. ಎಲ್ಲರಲ್ಲಿಯೂ ಸಹಾನುಭೂತಿಯನ್ನು ತೋರು. ನಗು ನಗುತ್ತಾ ಯಮನ ಕರೆ ಬಂದಾಗ, ಸಂತೋಷದಿಂದ ಹೊರಡಬೇಕು ಎನ್ನುವ ಮಾರ್ಗದರ್ಶನ ಮಾಡಿದ್ದಾರೆ. ಡಾಕ್ಟರ್ ಡಿ.ವಿ.ಜಿ.

◆ **ಜಿ.ಪಿ. ಲಕ್ಷ್ಮೀದೇವಿ**
**23444798**

## ನಮ್ಮವರು



### ಪ್ರೊ॥ ಎಸ್. ವೆಂಕಟರಾಮನ್

**ಈ** ಜಗತ್ತಿನಲ್ಲಿ ಎಷ್ಟೆಷ್ಟೋ ದಾನ ಮಾಡುವವರಿದ್ದಾರೆ. ಇಂತಹುದರಲ್ಲಿ ವಿದ್ಯಾದಾನವೂ ಒಂದು ಉತ್ತಮ ಕೆಲಸ. ಇದು ಒಬ್ಬ ಗುರುವು ತನ್ನ ಶಿಷ್ಯನಿಗೆ ಒಳ್ಳೆಯ ವಿದ್ಯೆಯನ್ನೂ, ಸಂಸ್ಕೃತಿಯನ್ನೂ ಕಲಿಸಿ ಒಬ್ಬ ಸತ್ಪ್ರಜೆ ಮಾಡುತ್ತಾನೆ. ಇಂತಹ ಲಕ್ಷಾಂತರ ಗುರುಗಳಲ್ಲಿ ಎಸ್. ವೆಂಕಟರಾಮನ್ ಸಹ ಒಬ್ಬರು.

ಎಸ್.ವೆಂಕಟರಾಮನ್ ಕೋಲಾರ ಜಿಲ್ಲೆಯ ಕೆ.ಜಿ.ಎಫ್. ನವರು. ಇವರು ಅಲಮೇಲಮ್ಮ ಮತ್ತು ಆರ್. ಶಾಮಣ್ಣ ನವರ ಪುತ್ರ. ಶಾಮಣ್ಣನವರಿಗೆ ಪಾರ್ವತಮ್ಮ, ವೆಂಕಟ ರಾಮನ್, ಸರಸ್ವತಿ ಎಂಬ ಮೂರು ಮಕ್ಕಳು, ಪಾರ್ವತಮ್ಮ ನವರ ಮಗ ಟಿ.ಎಸ್. ನಾಗೇಶ್ ಇವರೂ ಸಹ ಬೃಹಚ್ಚರಣ ಸಂಘದಲ್ಲಿ ಇದ್ದಾರೆ. ವೆಂಕಟರಾಮನ್ ಅಧ್ಯಾಪಕರಾಗಿಯೂ, ಸರಸ್ವತಿ ಬೊಂಬಾಯಿಯಲ್ಲಿ ತಮ್ಮ ಮಕ್ಕಳೊಂದಿಗೆ ನೆಮ್ಮದಿಯಿಂದ ಇದ್ದವರು. ಶಾಮಣ್ಣನವರು ಮಹಾ ದೈವಭಕ್ತರು ಮತ್ತು ಉತ್ತಮ ಸಹಾಯಹಸ್ತರು. ಇವರೂ ಸಹ ಕಿತ್ತಗಾನಹಳ್ಳಿ ನಾಗರಿಗೆ ಪಾನಕಪೂಜೆ ಮಾಡಿ ಕೋಸುಂಬರಿಯನ್ನು ಭಕ್ತರಿಗೆ ಹಂಚುತ್ತಿದ್ದರು. ಅವರು ಕೆ.ಜಿ.ಎಫ್.ನಲ್ಲಿ 'ಸನಾತನ ಧರ್ಮಸಭಾ'ಗೆ ಹದಿನೈದು ಇಪ್ಪತ್ತು ವರ್ಷ ಕಾರ್ಯದರ್ಶಿಯಾಗಿ ಇದ್ದರು. ಅಲ್ಲಿ ರಾಮೋತ್ಸವ ಬಹಳ ವಿಜೃಂಭಣೆಯಿಂದ ನಡೆಯುತ್ತಿತ್ತು. ನಿತ್ಯವೂ ಪೂಜೆ, ರಾಮಾಯಣ ಪಾರಾಯಣ ಮತ್ತು ಸಂಜೆ ಸಂಗೀತ, ಹರಿಕಥೆ ನಡೆಸಿ ಭಕ್ತರಿಗೆ ಪ್ರಸಾದ ಹಂಚುತ್ತಿದ್ದರು. ಇದನ್ನು ಎಂಟು, ಹತ್ತು ದಿನ ನಡೆಸುತ್ತಿದ್ದು ಕೊನೆಯದಿನ ರಾಮ ಪಟ್ಟಾಭಿಷೇಕವನ್ನು ಮತ್ತು ಅನ್ನ ಸಂತರ್ಪಣೆ ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಮಣಕ್ಕಾಲ್ ರಂಗರಾಜನ್, ಟಿ. ರುಕ್ಮಿಣಿಯಂತ ಸಂಗೀತವಿದ್ವಾಂಸರು ಸೋಸಲೆ ನಾರಾಯಣದಾಸ್, ಕೇಶವದಾಸ್, ಅಚ್ಯುತದಾಸ್ ಮೊದಲಾದ ಹರಿಕಥಾ ವಿದ್ವಾಂಸರು ಪಾಲ್ಗೊಳ್ಳುತ್ತಿದ್ದರು. ಕೊನೆಯದಿನ ಪಾಯಸ, ಲಾಡು, ಚಿತ್ರಾನ್ನ, ಹಪ್ಪಳ ಮುಂತಾದವೂ ಇರುತ್ತಿತ್ತು. ಅವರು ಧನುರ್ಮಾಸದಲ್ಲಿ ಭಜನೆಯನ್ನು ಸಹಚರರೊಡನೆ ನಡೆಸುತ್ತಿದ್ದರು.



ಪ್ರೊ॥ ಎಸ್. ವೆಂಕಟರಾಮನ್ ಕೆ.ಜಿ.ಎಫ್. ಮುನಿಸಿಪಲ್ ಶಾಲೆಯಲ್ಲಿ ವಿಜ್ಞಾನ ಮತ್ತು ಗಣಿತವನ್ನು ಹದಿನೆಂಟು ವರ್ಷ ಬೋಧಿಸಿದ್ದರು. ಅವರು ಇಂಗ್ಲಿಷ್ Short hand ಮತ್ತು Type writingನಲ್ಲಿ ಪ್ರೊಫೆಷಿಯನ್ಸಿಯಲ್ಲಿ ಪಾಸಾಗಿದ್ದರು. ಹಿಂದಿ ರತ್ನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಶಾಲನ್ನು ಪಡೆದಿದ್ದರು. ಬನಾರಸ್ ಹಿಂದೂ ಯೂನಿವರ್ಸಿಟಿಯಲ್ಲಿ ಎಂ.ಎ. ಇಂಗ್ಲಿಷ್ Distinctionನಲ್ಲಿ ಪಾಸಾಗಿದ್ದರು. ಹೈಸ್ಕೂಲಿನಲ್ಲಿದ್ದಾಗ B.Edನಲ್ಲಿ ಉತ್ತಮ ಅಂಕ ಪಡೆದು ಮಹಾರಾಜರಿಂದ ಸರ್ಟಿಫಿಕೇಟ್ ಹಾಗೂ ರೂ. 200/– ಮೊಬಲಗನ್ನು ಸ್ವೀಕರಿಸಿದ್ದರು. ಕ್ರೀಡಾ ಪ್ರೇಮಿಯಾದ ಇವರು ತೆರೇಸಾ ಕಾನ್ವೆಂಟ್, ಬಾಲಕಿಯರ ಹೈಸ್ಕೂಲು, ಬಂಗಾರು ಪೇಟೆಯಲ್ಲೂ ಕೆಲವು ವರ್ಷ ಅಧ್ಯಾಪಕರಾಗಿದ್ದರು.

ಅವರು ಎಂ.ಎ. ಆದ ಮೇಲೆ ಹತ್ತು ವರ್ಷಗಳು ಕಾಲೇಜಿನಲ್ಲಿ (K.G.F. First Grade College) ಇಂಗ್ಲಿಷ್ ಪಾಠ ನಡೆಸುತ್ತಿದ್ದರು. ಅವರ ಪಾಠಗಳು ಸ್ವಾರಸ್ಯವಾಗಿಯೂ, ರಸವತ್ತಾಗಿಯೂ ಇದ್ದುದರಿಂದ ಕೆಲ ಸಹೋದ್ಯೋಗಿಗಳು ಅದನ್ನು ಕೇಳಲೆಂದೇ ಬರುತ್ತಿದ್ದರು. ಕಾಲೇಜಿನ ಕೆಲ ಉಪನ್ಯಾಸಗಳನ್ನು Short handನಲ್ಲಿ ಬರೆದು ನಂತರ ತರ್ಜುಮೆ ಮಾಡಿಕೊಡುತ್ತಿದ್ದರು. ಕೆಲಕಾಲ ಹಿಂದೂ ಪತ್ರಿಕೆ ಯಲ್ಲಿ ಬರುತ್ತಿದ್ದ ಇಂಗ್ಲಿಷ್ ನ್ಯೂಸನ್ನೂ ಕನ್ನಡಕ್ಕೆ ತರ್ಜುಮೆ ಮಾಡಿಕೊಡುತ್ತಿದ್ದರು. ಅವರಿಗೆ ಇಬ್ಬರು ಹೆಣ್ಣುಮಕ್ಕಳು ನಳಿನಿ, ಪ್ರಭಾ ಹಾಗೂ ರವಿ ಎಂಬ ಪುತ್ರ ಇದ್ದಾನೆ. ರವಿ ಸಹ ಹಿರಿಯರು ನಡೆಸಿದಂತೆ ಕಿತ್ತಗಾನಹಳ್ಳಿಯ ನಾಗರಿನಲ್ಲಿ ಪಾನಕಪೂಜೆ ಕೈಂಕರ್ಯ ನಡೆಸುತ್ತಿದ್ದಾನೆ. ಅವನೂ ಸಹ ಸಮಿತಿಯಲ್ಲಿ ಸದಸ್ಯನಾಗಿದ್ದಾನೆ.

ನಮ್ಮ ತಂದೆ ಪ್ರೊ॥ ಎಸ್.ವೆಂಕಟರಾಮನ್ 47ನೇ ವಯಸ್ಸಿನಲ್ಲಿ ಅಕಾಲ ಮೃತ್ಯುವಿಗೀಡಾದರು.

ಇಂದಿಗೂ ಇಂತಹ ಗುರುಗಳು ಲಕ್ಷಾಂತರ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಎಲೆ ಮರೆಯ ಕಾಯಿಯಂತೆ ಶಿಸ್ತಿನಿಂದ ನಿಸ್ವಾರ್ಥದಿಂದ, ನಿಷ್ಠೆಯಿಂದ ಸೇವೆ ಸಲ್ಲಿಸಿಕೊಂಡು ಬರುತ್ತಿದ್ದಾರೆ. ಇಂತಹ ಗುರುಗಳಿಗೆ ನಾವೆಲ್ಲರೂ ನಮೋ ಎನ್ನೋಣವೇ ?



◆ ನಳಿನಿ ಶಿವರಾಂ
8095688150

# ಸಂಘದ ಒಂದು ದಿನ ಪ್ರವಾಸದ ಚಿತ್ರಗಳು















# ಸಂಘದ ಒಂದು ದಿನ ಪ್ರವಾಸದ ಚಿತ್ರಗಳು















# ನಮ್ಮವರ ಮನೆಗಳಲ್ಲಿ "ಬೊಂಬೆ ಉತ್ಸವ"










# ನಮ್ಮವರ ಮನೆಗಳಲ್ಲಿ "ಬೊಂಬೆ ಉತ್ಸವ"


















# ನವರಾತ್ರಿ ಹಬ್ಬ

ವಿಜಯೋತ್ಸವವನ್ನು ಆಚರಿಸವುದು ಅರಸರ ರೂಢಿಯಾಗಿತ್ತು. ವಿಜಯನಗರದ ಅರಸರು ಮಹಾನವಮಿಯನ್ನು ವಿಜೃಂಭಣೆಯಿಂದ ಆಚರಿಸುತ್ತಿದ್ದರು ಎನ್ನಲಾಗಿದೆ. ಕೃಷ್ಣನ ವಂಶಸ್ಥರು ಎಂದು ನಂಬಲಾದ ಯದುರಾಯ ಮತ್ತು ಕೃಷ್ಣರಾಯ ದ್ವಾರಕೆಯಿಂದ ಬಂದು ದಳವಾಯಿಗಳನ್ನು ಸೋಲಿಸಿ, 'ಒಡೆಯರ' ಆಳ್ವಿಕೆಯನ್ನು ಸ್ಥಾಪಿಸಿದ ಮೇಲೆ, ಮಹಾನವಮಿಯ ಆಚರಣೆ ಒಡೆಯರ ಕಾಲದಲ್ಲೂ ಮುಂದುವರಿಯಿತು. ಇದೇ ಸಂಸ್ಥಾನದ ರಾಜ ಒಡೆಯರ್ (1578 – 1617) ಈ ರೂಢಿಗೆ ಇನ್ನೂ ಮೆರಗು ತಂದರು ಎನ್ನುವುದು ಇತಿಹಾಸ.

ಶಕ್ತಿ ದೇವತೆಯಾದ ಚಾಮುಂಡೇಶ್ವರಿ ಮಹಿಷಾಸುರನನ್ನು ಮರ್ಧಿಸಿ ಮೈಸೂರಿನಲ್ಲೇ ನೆಲೆಸಿದ್ದೂ, ಮೈಸೂರು ದಸರೆಯ ಒಂದು ವೈಶಿಷ್ಟ್ಯ. ಇದರಿಂದ ದಸರಾ ಧರ್ಮ ರಕ್ಷಣೆಯ ಸಂಕೇತವೂ ಹೌದು. ನಮ್ಮಲ್ಲಿ ಹಬ್ಬಗಳು ಕೃಷಿಯಿಂದಲೂ ಅವಲಂಬಿತವಾಗಿದೆ. ಆಗ ತಾನೆ ಶ್ರಾವಣ–ಭಾದ್ರಪದದ ಬಿರುಸು ಮಳೆ ಮುಗಿದು, ಕೃಷಿಯ ಕೆಲಸ ಅಷ್ಟಾಗಿ ಇಲ್ಲದಾದಾಗ ಬರುವುದೇ ಆಶ್ವಯುಜ. ಇದು ಬಿಡುವು, ಆಚರಣೆಗೆ ಹೇಳಿ ಮಾಡಿಸಿದ್ದು.

ದಕ್ಷಿಣ ಭಾರತದ ಮೂರು ಕಡೆಯೂ ಸಮುದ್ರವಿದ್ದು, ಮೇಲೆ ವಿಂಧ್ಯ ಪರ್ವತವಿದ್ದು, ಪರ್ಷಿಯ ಅಥವಾ ಇತರ ದೇಶಗಳ ದಾಳಿ ಅಷ್ಟಾಗಿ ನಮ್ಮನ್ನು ಗೊಂದಲಗೊಳಿಸಿಲ್ಲ. ಇದಕ್ಕೇ ಇರಬೇಕು ಕಲೆ ಮತ್ತು ಸಂಸ್ಕೃತಿ ನಮ್ಮಲ್ಲಿ ಹೆಚ್ಚು ಕಾಣುವುದು. ಕಪ್ಪು ಮಣ್ಣಿನ ಕರ್ನಾಟಕಕ್ಕೆ ಪಶ್ಚಿಮ ಘಟ್ಟದ ವರವಿದ್ದು ಸುಭಿಕ್ಷತೆಯ ಯಾವ ಕೊರತೆಯೂ ಇಲ್ಲದ್ದರಿಂದ ಕಲೆ, ಸಂಸ್ಕೃತಿ, ವೈಚಾರಿಕತೆಗೆ ನಮ್ಮವರು ತೊಡಗಿಸಿಕೊಳ್ಳಲು ಸಾಧ್ಯವಿತ್ತು. ಶಿಲ್ಪಕಲೆ, ಅಭಿನಯ, ಕಾವ್ಯ, ಸಂಗೀತ, ಕಾಳಗ ಮತ್ತು ಇತರ ಕಲಾವಂತಿಕೆ ನಮ್ಮವರಿಗೆ ಸಾಧಿಸುವಂತಾಯ್ತು. ಹಂಪೆಯಂಥ ಒಂದು ದೇಗುಲವನ್ನು ನೋಡಿದರೆ ಸಾಕು ಒಂದು ಆಕೃತಿಗೆ ಎಷ್ಟು ಸಮಯ, ಸ್ಫೂರ್ತಿ, ಪ್ರೀತಿ, ಸ್ಥಿರತೆ ಒದಗಿರಬಹುದೆಂದು ತಿಳಿಯಲು. ಅರಸರ ವಿಜಯ ಸಂಕೇತವಾಗಿದ್ದ ದಸರಾ, ಕಲೆಯ ಪೋಷಣೆಗೆ ಒಂದು ಕಾರಣವಾಯಿತು.

ಅರಸರ ಆಚರಣೆಯನ್ನು ನಾಡ ಜನಗಳಿಗೆ ತಲುಪಿಸಲು ಕಲೆ ಹೀಗೆ ಪಾತ್ರ ವಹಿಸಿರಬೇಕು. ದಸರಾ ಕಲೆಯ ಪ್ರದರ್ಶನಕ್ಕೂ ಸ್ಫೂರ್ತಿಯಾಗಿರಬೇಕು. ಹೀಗೆ ಮನೆಮನೆಗಳಲ್ಲೂ ಕಲೆಯ ಹಬ್ಬ ಸಂದಿರಬೇಕು. ಮನೆಯಲ್ಲಿ ರಂಗೋಲಿ, ಪಾಕಶಾಸ್ತ್ರ, ಆತಿಥ್ಯ, ಸಜ್ಜು, ಸಿಂಗಾರ, ವಿನೋದ ಎಲ್ಲಕ್ಕೂ ಈ ಹಬ್ಬ ಸ್ಫೂರ್ತಿಯಾಗಿರಬೇಕು. ಹೀಗೆ ನವರಾತ್ರಿ ಗೊಂಬೆಗಳ ಹಬ್ಬವೂ ಬೆಳೆದು ಬಂದಿರಬೇಕು.


ದುಡ್ಡು ಕೊಟ್ಟು ದುಬಾರಿ ಬೊಂಬೆಗಳನ್ನು ಖರೀದಿಸುವುದು ಸುಲಭವಾದರೂ, ಕೈಯಲ್ಲೇ ಬೊಂಬೆಗಳನ್ನು ಅಲಂಕರಿಸಿ, ಜೋಡಿಸುವುದು ನಮ್ಮ ಹಿಂದಿನ ಜನಗಳಿಗೆ ಖುಷಿ ತಂದಿದೆ. ಈ ರೀತಿಯ ಭಾಗವಹಿಸುವಿಕೆ ಪ್ರಶಂಸನೀಯವೂ ಹೌದು.

ಮಲ್ಲೇಶ್ವರಂ, ಚಾಮರಾಜಪೇಟೆಯಲ್ಲಿ ಬೊಂಬೆಗಳನ್ನು ಅಲಂಕರಿಸಿ, ಇಟ್ಟು ಜನಪ್ರಿಯರಾದವರು ಎಷ್ಟೋ ಜನ ಇದ್ದರೆಂದು ಕೇಳಿದ್ದೇನೆ. ನಮ್ಮ ಮನೆಯಲ್ಲಿ ಈ ಪರಂಪರೆ ನಮ್ಮ ಅಜ್ಜಿಯವರಾದ ಶಶಿರೇಖಮ್ಮನವರಿಂದ ನಮ್ಮ ತಾಯಿ ಶ್ರೀಮತಿಯವರಿಗೆ ಬಂದು, ಪ್ರತಿವರ್ಷ ಇದಕ್ಕೆ ನಾವೆಲ್ಲರೂ ಕಾಯುವಷ್ಟು ನಮ್ಮ ಮನೆಯ–ಮನದ ಹಬ್ಬವಾಗಿದೆ. ಹಬ್ಬದ ಶುಭಾಶಯಗಳೊಂದಿಗೆ, ಶ್ರೀಮತಿ ಮತ್ತು ಪರಿವಾರ.

◆ **ಅನಿಲ್ ಕೌಂಡಿಣ್ಯ**
**9980766066**

ಸಂಘವು ದಸರಾ ಬೊಂಬೆ ಉತ್ಸವದ ಛಾಯಾಚಿತ್ರಗಳನ್ನು ಈ ಸಂದರ್ಭದಲ್ಲಿ ಆಹ್ವಾನಿಸಿ ಅಂತೆಯೇ ಪ್ರಕಟಿಸಲಾಗಿದೆ.

ಸದಸ್ಯ ಶ್ರೀ ಸುನಿಲ್ ವಿಜಯಕುಮಾರ್ ಹಾಗೂ ಶ್ರೀ ವಿಶ್ವನಾಥ ಶ್ರೀಮತಿ ವೀಣಾ ಕುಟುಂಬದವರು ತಮ್ಮ ಮನೆಯ ಗೊಂಬೆ ಪ್ರದರ್ಶನವನ್ನು ವೀಡಿಯೋದಲ್ಲಿ ಸೆರೆಹಿಡಿದು ಜನಮೆಚ್ಚುಗೆ ಪಡೆದಿರುತ್ತಾರೆ. –ಸಂ.




**ಶ್ರೀಮತಿ ಸೋನಿಯಾ ಶಿವರಾಂ ರಚಿಸಿರುವ 3ಡಿ ಚಿತ್ರ**

# ಸಂಕ್ರಾಂತಿ ಹಬ್ಬ



ಪುಷ್ಯಮಾಸದಲ್ಲಿ ಬರುವ, ಈ ಹಬ್ಬವನ್ನು ಮಕರ ಸಂಕ್ರಾಂತಿ ಎನ್ನುವರು. ಸೂರ್ಯನು ಮಕರ ರಾಶಿಯನ್ನು ಪ್ರವೇಶಿಸುವ ದಿನ, ಮಕರ ಸಂಕ್ರಮಣವೆಂದೂ ಹೇಳುವರು. ಈ ಸಮಯದಲ್ಲಿ ಹೊಸ ಧಾನ್ಯಗಳು ಬಂದಿರುತ್ತವೆ. ರೈತರಿಗೆ ಬಿಡುವಿನ ಕಾಲ. ಅಂದು ಎಲ್ಲ ದನಗಳನ್ನೂ ಚೆನ್ನಾಗಿ ತೊಳೆದು ಕೊಂಬುಗಳಿಗೆ ವಿವಿಧ ಬಣ್ಣ ಹಚ್ಚಿ, ಅಲಂಕರಿಸಿ, ಸಂಜೆ ಕಿಚ್ಚು ಹಾಯಿಸುವರು.

ತಾವು ಬೆಳೆದ ಅಕ್ಕಿ, ಕಬ್ಬು, ಕಡಲೆಕಾಯಿ ಹಾಗೂ ಎಳ್ಳನ್ನು ಬೆರೆಸಿ ಹಂಚುವರು. ದನಗಳಿಗೂ ಇದು ಹಬ್ಬ, ಬಿಳಿ ಎಳ್ಳನ್ನು ಚೆನ್ನಾಗಿ ಹುರಿದು, ಬೆಲ್ಲ, ಕೊಬ್ಬರಿಯನ್ನು ಸಣ್ಣಗೆ ಹೆಚ್ಚಿ ಬೆರೆಸಿ ಹುರಿಗಡಲೆ (ಕಡಲೆಪೊಪ್ಪು), ಕಡಲೆಕಾಯಿ ಬೀಜವನ್ನೂ ಹುರಿದು, ಬೆರೆಸಿ, ಮನೆ ಮನೆಗೂ ಹಂಚುವರು, ಇವಿಷ್ಟನ್ನೂ ಸಂಕ್ರಾಂತಿ ಎಳ್ಳು ಎಂದು ಕರೆಯುವರು. ಎಳ್ಳಿನ ಜೊತೆ ಕಬ್ಬಿನ ತುಂಡು, ಬಾಳೆಹಣ್ಣು ಕೊಡುವರು. ಸಣ್ಣ ಸಣ್ಣ, ಚಿತ್ರ ಬಿಡಿಸಿದ ಸಕ್ಕರೆ ಅಚ್ಚನ್ನೂ ಕೊಡುವರು. ಇದನ್ನು ಎಳ್ಳು ಬೀರುವುದು ಎನ್ನುವರು. ಈ ಹಬ್ಬಕ್ಕೆ ಜಾತಿ–ಮತ ಭೇದವಿಲ್ಲ. ಎಲ್ಲರೂ ಎಳ್ಳು ಬೀರುತ್ತಾರೆ. ಇದನ್ನು ಕ್ಷೇಮದ ಎಳ್ಳು ಎನ್ನುವರು. ಮದುವೆಯಾದ ಹೆಣ್ಣು ಮಕ್ಕಳ ಕೈಲಿ 5 ವರ್ಷ ಬಾಗಿನ ಕೊಡಿಸುವರು. ಎಳ್ಳು ತಿಂದು ಒಳ್ಳೆ ಮಾತಾಡು–ಎಂದು ನಾಣ್ಣುಡಿ. ಒಂದು ವರ್ಷಕ್ಕೆ 5 ಮುತ್ತೈದೆಯರಿಗೆ ಕೊಡಿಸುತ್ತಾರೆ. ಇನ್ನೂ ಕೆಲವರು ಮುತ್ತೈದೆಯರ ಸಂಖ್ಯೆಯನ್ನೂ, ವಸ್ತುಗಳ ಸಂಖ್ಯೆಯನ್ನೂ ಪ್ರತಿವರ್ಷ ಹೆಚ್ಚಿಸುತ್ತಾ ಹೋಗುತ್ತಾರೆ. ಕೆಲವರು ತೆಂಗಿನ ಕಾಯನ್ನು ಹೆಚ್ಚಿಸುವರು. ಬಾಳೆಹಣ್ಣನ್ನೂ ಹೆಚ್ಚಿಸುವರು. ಈ ವರ್ಷ 5, ಮುಂದಿನ ವರ್ಷ 10, ಅದರ ಮುಂದಿನ ವರ್ಷ 15 ಹೀಗೆ.

1. ಒಬ್ಬ ಮುತ್ತೈದೆಗೆ 1 ತೆಂಗಿನಕಾಯಿ, 5 ಬಾಳೆಯ ಹಣ್ಣು, ಕಬ್ಬು, ಸಕ್ಕರೆ ಬೆರೆಸಿದ ಎಳ್ಳನ್ನು ಎಲೆ ಅಡಿಕೆ, ದಕ್ಷಿಣೆಯೊಂದಿಗೆ 5 ವರ್ಷ ಕೊಡುವುದು.
2. ಎರಡನೆಯ ವರ್ಷ : 1 ಕಾಯಿ, 10 ಬಾಳೆಹಣ್ಣು, ಉಳಿದುದೆಲ್ಲವೂ ಮೇಲಿನಂತೆಯೇ. ಇಬ್ಬರು ಮುತ್ತೈದೆಯರು.
3. ಮೂರನೆಯ ವರ್ಷ : ಬಾಳೆಹಣ್ಣು ಮಾತ್ರ 15, ಉಳಿದೆಲ್ಲವೂ ಮೇಲಿನಂತೆಯೇ. ಮೂರು ಮುತ್ತೈದೆಯರಿಗೆ.
4. ಕಾಯಿ 4, ಉಳಿದೆಲ್ಲವೂ ಮೇಲಿನಂತೆಯೇ. ನಾಲ್ಕು ಮುತ್ತೈದೆಯರು
5. 1 ಕಾಯಿ, 25 ಬಾಳೆಹಣ್ಣು, ಐದು ಮುತ್ತೈದೆಯರಿಗೆ
6. ಮುತ್ತೈದೆಯರನ್ನು ಹೆಚ್ಚಿಸುತ್ತಾ ಹೋಗುವುದು. 1ನೇ ವರ್ಷ 5, ಎರಡನೆಯ ವರ್ಷ 10. ಮೂರನೆಯ ವರ್ಷ 15 ಇತ್ಯಾದಿ.
7. ಐದನೆಯ ವರ್ಷ 25 ಮುತ್ತೈದೆಯರಿಗೆ ಬಾಗಿನ ಕೊಡುವುದು.

ಇನ್ನೊಂದು ರೀತಿ : ಮೊದಲ ವರ್ಷ : 1 ಕಾಯಿ, 5 ಬಾಳೆಯ ಹಣ್ಣು, ಕಬ್ಬಿನ ತುಂಡು, ಸಕ್ಕರೆ ಅಚ್ಚು, ಬೆರೆಸಿದ ಎಳ್ಳು, ಎಲೆ ಅಡಿಕೆ, ದಕ್ಷಿಣೆಯೊಂದಿಗೆ 5 ಸುಮಂಗಲಿಯರಿಗೆ ಕೊಡುವುದು.

ಎರಡನೆಯ ವರ್ಷ : 2 ಕಾಯಿ, ಉಳಿದುದು ಮೇಲಿನಂತೆ, 5 ಸುಮಂಗಲಿಯರಿಗೆ.

ಮೂರನೆಯ ವರ್ಷ : 3 ಕಾಯಿ, ಉಳಿದದ್ದು ಮೇಲಿನಂತೆ,

ನಾಲ್ಕನೆಯ ವರ್ಷ : 4 ಕಾಯಿ, ಐದನೆಯ ವರ್ಷ 5 ಕಾಯಿ ಇತ್ಯಾದಿ.


5 ವರ್ಷದೊಳಗಿನ ಮಕ್ಕಳಿಗೆ, ಬೆರೆಸಿದ ಎಳ್ಳು, ಸಣ್ಣಗೆ ಹೆಚ್ಚಿದ ಕಬ್ಬಿನ ಚೂರು, ದುಡ್ಡನ್ನು ಹಾಕಿ ಆರತಿ ಎತ್ತುತ್ತಾರೆ.

ಒಂದು ಪಾವಿಗೆ ಒಂದು ಬೆರಳಿನಲ್ಲಿ ಸುತ್ತಲೂ ಸುಣ್ಣ ಹಚ್ಚಿ, ಅದರೊಳಗೆ ಮೇಲೆ ಹೇಳಿದ ಪದಾರ್ಥಗಳನ್ನು ತುಂಬುತ್ತಾರೆ.

ಮಕ್ಕಳನ್ನು ಕೂರಿಸಿ, ಅವರ ತಲೆಯ ಮೇಲೆ ಪಾವಿನ ವಸ್ತುಗಳನ್ನೆಲ್ಲ ಸುರಿದು ಆರತಿ ಎತ್ತುತ್ತಾರೆ. ಕೆಳಗೆ ಬಿದ್ದ ಪೈಸೆಗಳನ್ನು ಮಕ್ಕಳು ಎತ್ತಿಕೊಳ್ಳುತ್ತಾರೆ.

◆ ಎ.ಎನ್. ಲಕ್ಷ್ಮೀದೇವಿ ಬಯ್ಯಪ್ಪನಹಳ್ಳಿ
25489293

# ನೆನಪಿನಂಗಳದಲ್ಲಿ ಚಿತ್ರ




ಕಾಚರಕನಹಳ್ಳಿ ದಿ॥ ಲಕ್ಷ್ಮಣರಾವ್‌ರವರ ವಿವಾಹ ಮಹೋತ್ಸವದ ಸಾಂದರ್ಭಿಕ ಚಿತ್ರ (1929)
ಕೃಪೆ : ಪ್ರದೀಪ್ ಕುಮಾರ್




ಶ್ರೀ ಬಿ.ಆರ್. ಗಂಗಾಧರ ಮತ್ತು ಸರೋಜರವರ ವಿವಾಹ ಸಂದರ್ಭದ ಚಿತ್ರ (1968)
ಕೃಪೆ : ರಮೇಶ್ ಆರ್.



ರಾಜಪುರ ಗೋಪಿನಾಥ – ಭ್ರಮರಾಂಬರವರ ವಿವಾಹ ಮಹೋತ್ಸವ ಚಿತ್ರ (1967)
ಕೃಪೆ : ರಾಜಲಕ್ಷ್ಮಿ ರಾಮಕೃಷ್ಣ



ದಿ॥ ಶ್ರೀಕಂಠೇಶ್ವರ ಐಯ್ಯರ್ ಅವರ ವಿವಾಹ ಸಂದರ್ಭದ ಚಿತ್ರ
ಕೃಪೆ : ಎಸ್. ಶಿವರಾಂ



ಹಸಿಗಾಳ ಎಚ್.ಪಿ. ಶ್ರೀನಿವಾಸ್‌ರವರ ವಿವಾಹ ಸಂದರ್ಭದ ಚಿತ್ರ (1973)
ಕೃಪೆ : ಹೆಚ್.ಪಿ. ವೇಣುಗೋಪಾಲ್

# ಮೀಟಿಂಗ್

"ಮೀಟಿಂಗ್" ಪದ ಕಿವಿಗೆ ಬಿದ್ದೊಡನೆ ನಮ್ಮ ಮನಸ್ಸಿಗೆ ಒಂಥರಾ ತಾತ್ಸಾರ, ಲೇವಡಿ, ಕಾಲಹರಣ ಇತ್ಯಾದಿ ಅನುಭವವಾಗುವುದೇ ಜಾಸ್ತಿ ವಿನಃ ಮೀಟಿಂಗ್‌ನ ಗಾಂಭೀರ್ಯ, ಉದ್ದೇಶಗಳತ್ತ ಗಮನ ಕೇಂದ್ರೀಕರಣ ಕೊಂಚ ಕಷ್ಟವೇ. ಮೀಟಿಂಗ್‌ನಲ್ಲಿ ಗಂಟೆಗಟ್ಟಲೆ ಟೈಮ್ ವೇಸ್ಟ್ ಮಾಡಿ ಬರೇ 'ಮಿನಿಟ್ಸ್' ಅಷ್ಟೇ ಟಿಪ್ಪಣಿ ಮಾಡಿಟ್ಟುಕೊಳ್ಳುವುದು... ಎಂದು ಜೋಕ್ ನೀವು ಕೇಳಿರಬಹುದು. ಹಾಗೆಯೇ ನನಗೆ ಮೀಟಿಂಗ್‌ಗಿಂತ ಅಲ್ಲಿರಬಹುದಾದ ಈಟಿಂಗ್ ಮುಖ್ಯ ಅನ್ನುವ ಜನವೂ ಬಹಳ ಸಿಗುತ್ತಾರೆ.

ಜಸ್ಪಾಲ್‌ಭಟ್ಟಿಯೂ ತನ್ನ 'ಫ್ಲಾಪ್ ಷೋ' ಹಾಸ್ಯ ಧಾರಾವಾಹಿಯ ಒಂದು ಕಂತನ್ನು ಮೀಟಿಂಗ್ ಬಗ್ಗೆಯೇ ನಿರ್ಮಿಸಿದ್ದರು. ಆ ಮೀಟಿಂಗ್‌ನಲ್ಲಿ ತೀರ್ಮಾನವಾದ ಒಂದೇ ಒಂದು ಅಂಶವೆಂದರೆ ಮುಂದಿನ ಮೀಟಿಂಗ್ ಯಾವ ದಿನದಂದು ಎಂದು, ಹೀಗಿದೆ ಮೀಟಿಂಗ್ ಮಹಾತ್ಮೆ!

ನನ್ನ ತಂದೆಯವರಾದ ವತ್ಸ ಮತ್ತು ಶೇಷಾದ್ರಿಗವಾಯ್ (ಚೇಚಿ) ಕೂಡ 3–4 ತಿಂಗಳಿಗೊಮ್ಮೆ ನಮ್ಮ ಮನೆಯಲ್ಲಿ 'ಕಲಾವಿದರ ಸಂಘದ' ಮೀಟಿಂಗ್ ನಡೆಸುತ್ತಿದ್ದರು.

ಭಾನುವಾರಗಳಲ್ಲೇ ನಡೆಯುತ್ತಿತ್ತು. ಬೆಳಗ್ಗೆ ಎಲ್ಲರಿಗೂ ಸಕತ್ತಾಗಿ ತಿಂಡಿ ಆಗುತ್ತಿತ್ತು. (ತಟ್ಟೆಇಡ್ಲಿ, ಚಟ್ನಿ, ಪೂರಿ–ಸಾಗು ಮುಂತಾದುವು) ಕಾಫಿ–ತಿಂಡಿ ಆದ ನಂತರ 10 ಘಂಟೆಗೆ ಮೀಟಿಂಗ್ ಪ್ರಾರಂಭವಾಗಿ 12 ಘಂಟೆಗೆ ಮುಗಿಯುತ್ತಿತ್ತು. ನಡುವೆ ಲಘು ಹಾಸ್ಯ, ಸಂಘದ ಧ್ಯೇಯೋದ್ದೇಶ, ಯೋಜನೆಯೊಂದರ ಬಗ್ಗೆ ವಿಚಾರ ಮಂಥನ ಎಲ್ಲವೂ ಇರುತ್ತಿತ್ತು. ಇದುವರೆಗಿನ ಪ್ರಗತಿಯ ಬಗ್ಗೆ ಸಿಂಹಾವಲೋಕನ ಇದ್ದು, ಅದು ಔಪಚಾರಿಕ ಲಘು ಸಂತೋಷಕೂಟವೇ ಆಗಿರುತ್ತಿತ್ತು.

ಕೆಲವೊಮ್ಮೆ ನೀವೂ ಸಹ ಮೀಟಿಂಗ್ ನಡೆಸುವರಾಗಿರಬಹುದು. ನೀವು ನಿಭಾಯಿಸಲಿರುವ ಗುಂಪಿನಲ್ಲಿ ಬೇರೆ ಬೇರೆ ಖದರಿನ, ವರ್ಚಸ್ಸಿನ, ಪ್ರತಿಭೆಯ, ಸ್ವಭಾವದ ಜನರಿರುತ್ತಾರೆ. ಅಂತಹ ಗುಂಪನ್ನು ಮುನ್ನಡೆಸುವ ಕಾರ್ಯದಲ್ಲಿ ನಿಮ್ಮ ಯಶಸ್ಸಿಗೆ ಕೆಲವು ಸರಳ ಸೂತ್ರಗಳನ್ನು ಇಲ್ಲಿ ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದೇನೆ.

**ಜಗಳ ಗಂಟಿ ಸ್ವಭಾವ :** ಅವರ ಘರ್ಜನೆಗೆ ನೀವು ಹೆದರದೆ, ಬೇರೆಯವರನ್ನೂ ವಾದಕ್ಕೆ ಸೇರಿಸುವ ಮೂಲಕ ಅವರ ಪ್ರಭಾವವನ್ನು ತಗ್ಗಿಸಿ, ಅವರ ಜಗಳ ಗಂಟಿ ಸಾಮರ್ಥ್ಯವನ್ನು ಹೇಗೆ ಉಪಯೋಗಿಸಿಕೊಳ್ಳ ಬಹುದೆಂದು ನೋಡಿ. ಕೆಲವೊಮ್ಮೆ ಉತ್ತಮ ಸಲಹೆಗಳನ್ನು ಸ್ವೀಕರಿಸಬೇಕೇ ಹೊರತು, ವಿರೋಧವೆಂದು ಭಾವಿಸಬಾರದು.

**ಧನಾತ್ಮಕ ಸ್ವಭಾವ :** ಇಂಥಹವರನ್ನು ಹೆಚ್ಚಾಗಿ ಉಪಯೋಗಿಸಿಕೊಳ್ಳಿ. ಕೆಲವೊಮ್ಮೆ ಇವರು ಅನಗತ್ಯ ಸಂದರ್ಭಗಳಲ್ಲೂ ಸಹಾಯ ಗುಣವನ್ನು ತೋರಿಸಬಹುದು. ಆ ಬಗ್ಗೆ ಸ್ವಲ್ಪ ಎಚ್ಚರವಹಿಸಿ, ಮೀಟಿಂಗ್‌ನ ತಾತ್ಪರ್ಯ ಮಂಡನೆಗೆ, ವಿಷಯಗಳ ಕ್ರೋಢೀಕರಣಕ್ಕೆ ಇಂಥವರನ್ನು ಬಳಸಿಕೊಳ್ಳಿ.

**ಎಲ್ಲವನ್ನು ಬಲ್ಲೆ ಎಂಬ ಸ್ವಭಾವ :** ಇವರ 'ಬಲ್ಲೆ'ಯನ್ನು ಒಪ್ಪಿಕೊಳ್ಳಬೇಡಿ. ನೀವು ನಿರ್ಧಾರ ತೆಗೆದುಕೊಳ್ಳುವ ಮೊದಲು ಇನ್ನಿತರರ ಅಭಿಪ್ರಾಯವನ್ನು ಪಡೆಯಿರಿ.

**ವಟಗುಟ್ಟುವ ಸ್ವಭಾವ :** ಇವರ ಮಾತುಗಳಿಗೆ ಕಡಿವಾಣ ಹಾಕಿ, ಮಾತನಾಡಲು ಸಮಯ ಕಡಿಮೆ ಮಾಡಿ. ಇನ್ನೂ ಮಾತು ಮುಂದುವರಿಸಿದರೆ ಸ್ನೇಹಪರವಾಗಿ ನಿಯಂತ್ರಿಸಿ, ನಿರ್ನಾಮ ಮಾಡಬೇಡಿ. ಅವರಿಂದಲೂ ಉಪಯೋಗವಿದೆ.

**ಕಪಟ ಸಂನ್ಯಾಸಿ ಸ್ವಭಾವ :** ವಿಶೇಷ ನಿಗಾ ಇರಿಸಬೇಕು. ನಿಷ್ಪಕ್ಷಪಾತರಾಗಿದ್ದರೆ ಇವರ ಜ್ಞಾನ, ಅನುಭವವನ್ನು ಗುರುತಿಸಿ, ಮೌಲಿಕ ವಿಚಾರಗಳಿದ್ದರೆ ಮನ್ನಣೆ ಕೊಡಿ.

ಮೌನಿಗಳು ಹುಬ್ಬೇರಿಸುವವರು ಗುಂಪು ಇವರೊಂದಿಗೆ ಹೊಂದಿಕೊಂಡರೆ, ವಿಚಾರಧಾರೆಗಳತ್ತ ಗಮನಹರಿಸಿ ಅದು ಕಾಲಹರಣ ಎಂದಾದರೆ ವಿಷಯವನ್ನು ಬಿಟ್ಟು ಮುಂದುವರೆಸಿ. ಎಲ್ಲರನ್ನೂ ಸಮಯೋಚಿತವಾಗಿ ಬಳಸಿಕೊಳ್ಳುವ ಜಾಣ್ಮೆ ನಿಮಗಿರಬೇಕು. ಹೀಗೆಯೇ ನೀವು ಭಾಗವಹಿಸುವ, ನಡೆಸುವ ಮೀಟಿಂಗ್‌ಗಳಲ್ಲಿ ಇನ್ನೂ ಬೇರೆ ಬೇರೆ ನಮೂನೆಗಳ ಜನರು ನಿಮಗೆ ಸಿಕ್ಕಬಹುದು. ನಿಮ್ಮ ಅನುಭವ, ಸ್ವಾರಸ್ಯಗಳನ್ನೂ ಬರೆದು ತಿಳಿಸಿ, ಎಲ್ಲರೊಂದಿಗೆ ಹಂಚಿಕೊಳ್ಳಿ.

◆ **ಗಾಯತ್ರಿ ಶೇಷಾಚಲ**
**25630483**







# ಶುಭ–ವಿವಾಹ

☆ ಸಂಘದ ಸದಸ್ಯ ಶ್ರೀ ಕೆ. ಗೋವಿಂದರಾಜ್ ಹಾಗೂ ದಿ॥ ಭಾಗ್ಯಲಕ್ಷ್ಮಿರವರ ಪುತ್ರ **ಚಿ॥ ಜಿ. ಶ್ರೀಕಾಂತ್**ರವರ ವಿವಾಹವು ದಿ॥ ಗಾಯತ್ರಿ ಮತ್ತು ದಿ॥ ಶ್ರೀನಿವಾಸಮೂರ್ತಿಯವರ ಪುತ್ರಿ **ಚಿ॥ಸೌ॥ ಪಿ.ಎಸ್. ತೇಜಸ್ವಿನಿ**ಯವರೊಂದಿಗೆ ದಿನಾಂಕ 22–10–2018ರಂದು ಬೆಂಗಳೂರಿನಲ್ಲಿ ನೆರವೇರಿತು.

☆ ಸಂಘದ ಹಿರಿಯ ಸದಸ್ಯ ಶ್ರೀ ಕೆ.ಬಿ. ಮುರಳಿ ಮತ್ತು ಶ್ರೀಮತಿ ಸುಪ್ರಿಯಾ ಮುರಳಿರವರ ಪುತ್ರಿ **ಚಿ॥ಸೌ॥ ಪದ್ಮಶ್ರೀ** ಮುರಳಿಯವರ ವಿವಾಹವು, ಶ್ರೀಮತಿ ಪ್ರೇಮಾ ರಮೇಶ್ ಹಾಗೂ ಶ್ರೀ ರಮೇಶ್‌ರವರ ಪುತ್ರ **ಚಿ॥ ಶಶಾಂಕ್**ರವರೊಂದಿಗೆ ದಿನಾಂಕ 22–10–2018ರಂದು ಬೆಂಗಳೂರಿನಲ್ಲಿ ನೆರವೇರಿತು.

☆ ಸಂಘದ ಸದಸ್ಯ ಶ್ರೀ ಗುರುಪ್ರಸಾದ್ ಮತ್ತು ಶ್ರೀಮತಿ ಸವಿತಾಪ್ರಸಾದ್‌ರವರ ಪುತ್ರ **ಚಿ॥ ಜಿ. ಶರತ್**ರವರ ವಿವಾಹವು, ಶ್ರೀಮತಿ ಲಕ್ಷ್ಮಿ ಮತ್ತು ದಿ॥ ಕೆ. ನಾಗರಾಜ್‌ರವರ ಪುತ್ರಿ **ಚಿ॥ಸೌ॥ ಎನ್. ಭವ್ಯಾ**ರವರೊಂದಿಗೆ ದಿನಾಂಕ 14–11–2018ರಂದು ಬೆಂಗಳೂರಿನಲ್ಲಿ ನೆರವೇರಿತು.

☆ ಸಂಘದ ಪೋಷಕ ಸದಸ್ಯ ಆರ್.ಪಿ. ರವಿಶಂಕರರವರ ಸೋದರಿ ಶ್ರೀಮತಿ ಉಷಾ ಮೋಹನ್‌ರಾಮ್‌ರವರ ಪುತ್ರಿ **ಚಿ॥ಸೌ॥ ರೇವತಿ**ಯವರು **ಚಿ॥ ಅರ್ಚಿತ್** ಭಾರದ್ವಾಜರವರನ್ನು ದಿನಾಂಕ 02–11–2018ರಂದು ವಿವಾಹವಾದರು.

☆ ಸಂಘದ ಸದಸ್ಯೆ ಶ್ರೀಮತಿ ಲಲಿತಾಕೃಷ್ಣಮೂರ್ತಿ ಹಾಗೂ ಶ್ರೀ ಕೃಷ್ಣಮೂರ್ತಿಯವರ ಪುತ್ರಿ **ಚಿ॥ಸೌ॥ ಕೃತಿಕಾ**ರ ವಿವಾಹವು ಶ್ರೀಮತಿ ಲಲಿತಾ ಹಾಗೂ ಶ್ರೀ ಆನಂದರವರ ಪುತ್ರ **ಚಿ॥ ಸಂದೀಪ್**ರವರೊಂದಿಗೆ ದಿನಾಂಕ 02–11–2018ರಂದು ಮೈಸೂರಿನಲ್ಲಿ ನೆರವೇರಿತು.

☆ ಸಂಘದ ಸದಸ್ಯ ಶ್ರೀ ವೆಂಕಟಸುಬ್ಬರಾವ್ ಹಾಗೂ ಶ್ರೀಮತಿ ವಸಂತಲಕ್ಷ್ಮಿರವರ ಪುತ್ರ **ಚಿ॥ ಅರುಣ**ರ ವಿವಾಹವು ಶ್ರೀಮತಿ ಎಸ್. ಕಾಮಾಕ್ಷಿ ಮತ್ತು ಎ.ಆರ್. ಕೃಷ್ಣರವರ ಪುತ್ರಿ **ಚಿ॥ ಸೌ॥ ಎ.ಕೆ. ಶ್ವೇತಾ**ರವರೊಂದಿಗೆ ದಿನಾಂಕ 9–12–18 ಬೆಂಗಳೂರಿನಲ್ಲಿ ನೆರವೇರಿತು.

# ಶಿವರಾತ್ರಿ

◆ ಎ.ಎನ್. ಲಕ್ಷ್ಮಿದೇವಿ

**ಮಾ**ಘ ಬಹುಳ ತ್ರಯೋದಶಿಯಂದು ಬರುವ ಶಿವರಾತ್ರಿ ಹಬ್ಬ. ಈ ದಿನ ಊಟವಿಲ್ಲ. ಫಲಾಹಾರ ಮಾಡಬಹುದು. ಹಾಲು, ಹಣ್ಣು ಒಪ್ಪೊತ್ತು ತಿಂದು ಉಪವಾಸವಿದ್ದು ಜಾಗರಣೆ ಮಾಡುವವರೂ ಉಂಟು. ಹಿಂದಿನ ಕಾಲದಲ್ಲಿ ಬೆಳಿಗ್ಗೆ ಪೂಜೆ ಮಾಡಿದ ನಂತರ, 7 ತುಂಬೆ ಹೂವು, 7 ಕಾಳು ಮೆಣಸು, ಬಾಯಲ್ಲಿ ಹಾಕಿಕೊಂಡು ತಿಂದರೆ ಬೇರೆ ಏನನ್ನೂ ತಿನ್ನುತ್ತಿರಲಿಲ್ಲ. ಹಾಲೊಂದನ್ನು ಬಿಟ್ಟರೆ ನೀರೂ ಕುಡಿಯುತ್ತಿರಲಿಲ್ಲ. ಮರುದಿನ ಬೆಳಿಗ್ಗೆ ಸ್ನಾನ, ಪೂಜೆ. ಮುಗಿದ ಮೇಲೆ ಊಟ. ಸಮುದ್ರಮಥನ ಕಾಲದಲ್ಲಿ ಶಿವನು ಹಾಲಾಹಲವನ್ನು ಕುಡಿದನು, ಆ ವಿಷವು ಶಿವನ ಮೈಯೆಲ್ಲ ಆವರಿಸದಂತೆ ಶಿವನನ್ನು ಎಚ್ಚರದಲ್ಲೇ ಇರಿಸಬೇಕೆಂದು ದೇವ ದಾನವರೆಲ್ಲರೂ ರಾತ್ರಿಯೆಲ್ಲ ಭಜನೆ ಮಾಡುತ್ತಾ ಜಾಗರಣೆ ಮಾಡಿದರು. ಅದಕ್ಕಾಗಿ ನಾವೂ ಜಾಗರಣೆ ಮಾಡಿ ಉಪವಾಸ ಇರುತ್ತೇವೆ. ದಾಕ್ಷಾಯಿಣಿಯು ಯಜ್ಞ ಕುಂಡದಲ್ಲಿ ಬಿದ್ದ ಮೇಲೆ, ಶಿವ ತಪಸ್ಸು ಮಾಡುತ್ತಾ ಕುಳಿತ. ಆಗ ಪಾರ್ವತಿಯು ತನ್ನ ತಪೋಬಲದಿಂದ ಶಿವನ ಕಣ್ಣನ್ನು ತೆರೆಸಿ, ಶಿವನೊಡನೆ ವಿವಾಹವಾಗಿ, ಲೋಕ ಕಲ್ಯಾಣ ಮಾಡಿದ ದಿನ. ಎಲ್ಲ ಜಾತಿಯವರೂ ಜಾಗರಣೆ, ಉಪವಾಸ ಮಾಡುತ್ತಾರೆ. ಶಿವದೇವಾಲಯಗಳಲ್ಲಿ ವಿಶೇಷ ಪೂಜೆ ಮಾಡಿರುತ್ತಾರೆ. ಸಾಮೂಹಿಕ ಪೂಜೆ, ಸಾಮೂಹಿಕ ಭಜನೆ, ಜಾಗರಣೆ, ಉಪವಾಸ, ಪಾರಣೆ. ಮಾಡಿ ಶಿವರಾತ್ರಿಯನ್ನು ವ್ರತದಂತೆ ಆಚರಿಸುತ್ತಾರೆ.



**ಕಾರ್ತಿಕಾ ಸೋಮವಾರದಂದು ಶಿವದೇವಾಲಯದಲ್ಲಿ ಸಂಘದ ಸದಸ್ಯ ಶ್ರೀ ನಿರಂಜನ್‌ರವರು**

# ನಮ್ಮನ್ನಗಲಿದ ನಮ್ಮವರಿಗೆ ಶ್ರದ್ಧಾಂಜಲಿ

☆ ಶ್ರೀಮತಿ ನರಸುರಾಮಚಂದ್ರರವರ ಪತಿ **ಶ್ರೀ ಎಸ್. ರಾಮಚಂದ್ರ** (77) ದಿನಾಂಕ **24.09.18**

☆ ಸಂಘದ ಪೋಷಕ ಶ್ರೀ ಚಂದ್ರಮೌಳಿಯವರ ಸೋದರಿ ಸಂಘದ ಪೋಷಕರಾದ **ಶ್ರೀಮತಿ ಶ್ಯಾಮಲಾ ಸ್ವಾಮಿಯವರು** ದಿನಾಂಕ **8.10.18**

☆ ಸಂಘದ ಸದಸ್ಯ ದಿ॥ ಆನೇಕಲ್ ಕೆ.ಟಿ. ಪಟ್ಟಾಭಿರಾಮನ್‌ರವರ ಪತ್ನಿ **ಶ್ರೀಮತಿ ಮೀನಾಕ್ಷಮ್ಮ**ನವರು ದಿನಾಂಕ **08.10.18**

☆ ಸಂಘದ ಸದಸ್ಯ ಲಕ್ಷ್ಮೀನಾರಾಯಣರವರ ತಂಗಿ ಶ್ರೀಮತಿ **ಪದ್ಮಪ್ರಭಾ**ರವರು ದಿನಾಂಕ **15.10.18**

☆ ಸಂಘದ ಸದಸ್ಯ ಶ್ರೀ ಪ್ರಸಾದ್ ರಾಜಣ್ಣರವರ ತಂದೆ **ಶ್ರೀ ರಾಜಣ್ಣ** ಬೂದಿಗೆರೆ ಸುಬ್ಬರಾವ್‌ರವರು (80) ದಿನಾಂಕ **18.10.2018**

☆ ಸಂಘದ ಸದಸ್ಯ **ಜಿ.ವಿ. ಛಾಯಾಪತಿ** (77) ದಿನಾಂಕ **16.11.2018**

☆ ಸಂಘದ ಸದಸ್ಯರಾದ ದಿ॥ ನಂಜುಂಡಯ್ಯ (ನಂಜು) ರವರ ಪುತ್ರ ಸಂಘದ ಸದಸ್ಯ **ಶ್ರೀ ನಾಗರಾಜ್**ರವರು (75) ದಿನಾಂಕ **2.12.2018**

☆ ಸಮುದಾಯದ ಎಸ್.ಎನ್. ಕೃಷ್ಣಸ್ವಾಮಿ (92) ವಿವೇಕಾನಂದ ವಿದ್ಯಾಶಾಲೆ ಸ್ಥಾಪಕ ಅಧ್ಯಕ್ಷರು ದಿನಾಂಕ **3.12.2018**

☆ ಸಂಘದ ಲೆಕ್ಕಪತ್ರ ಪರಿಶೋಧಕ ಶ್ರೀ ಗೋವಿಂದಪ್ರಸಾದ್‌ರವರ ಮಾವ **ಶ್ರೀ ಆರ್. ನಾಗರಾಜ್‌ರಾವ್** (82) ದಿನಾಂಕ **18.12.2018**

## ಜಿ.ವಿ. ಸುಬ್ಬಣ್ಣ



☆ ಬೃಹಚ್ಚರಣ ಸಂಘದ ಪ್ರಾರಂಭಿಕ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿರುವುದರ ಜೊತೆಗೆ ಮಲ್ಲೇಶ್ವರದ "ವೇದ ಧರ್ಮ ಪರಿಪಾಲನಾ ಸಭಾ" ಸಂಸ್ಥೆಯಲ್ಲಿ 19 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ವೈದಿಕ ಧರ್ಮಸಭಾ, ಅಖಿಲ ಕರ್ನಾಟಕ ಬ್ರಾಹ್ಮಣ ಸಭಾ ಮುಂತಾದ ಅನೇಕ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಗುಂಜೂರು ವೆಂಕಟಗಿರಿಯಪ್ಪ ಹಾಗೂ ಮೀನಾಕ್ಷಮ್ಮ ದಂಪತಿಗಳ ಮೂರನೆಯ ಪುತ್ರ ದಿನಾಂಕ 21.06.1941ರಂದು ಜನಿಸಿದ ಶ್ರೀಯುತರು ತಮ್ಮ ಧರ್ಮಪತ್ನಿ ಶ್ರೀಮತಿ ರುಕ್ಮಿಣಿ, ಇಬ್ಬರು ಪುತ್ರಿಯರು, ಅಳಿಯಂದಿರು, ನಾಲ್ಕು ಮೊಮ್ಮಕ್ಕಳನ್ನು ಅಗಲಿದ್ದಾರೆ. ಸರಳ, ಮೃದು ಸ್ವಭಾವ, ಸೇವಾಮನೋಭಾವ ಉಳ್ಳ ವ್ಯಕ್ತಿಯಾಗಿದ್ದು ಬೆಂಗಳೂರಿನ ಕಿರ್ಲೋಸ್ಕರ್ ಸಂಸ್ಥೆಯಲ್ಲಿ 38 ವರ್ಷಗಳ ಕಾಲ ಸೇವೆ ಸಲ್ಲಿಸಿರುತ್ತಾರೆ. ದಿನಾಂಕ **27.08.2018**ರಂದು ನಮ್ಮನಗಲಿರುತ್ತಾರೆ.

***ಬೃಹಚ್ಚರಣ ಸಂಘವು ಅಗಲಿದವರನ್ನು ಸ್ಮರಿಸಿ . ಮೃತರ ಆತ್ಮಕ್ಕೆ ಶಾಂತಿ ಲಭಿಸಲಿ ಎಂದು ಕೋರುತ್ತದೆ.***



## ಧರ್ಮಸೂಕ್ಷ್ಮ

ಉಭಯ ಕುಲಪಿತಾಮಹ ಭೀಷ್ಮಾಚಾರ್ಯರು ಇಚ್ಛಾಮರಣಿ. ಶರಶಯ್ಯೆಯಲ್ಲಿ ಪುಣ್ಯಕಾಲದಲ್ಲಿ ಶರೀರತ್ಯಾಗ ಮಾಡುವ ನಿರೀಕ್ಷೆಯಲ್ಲಿದ್ದರು. ಆಗ ಭಗವಾನ್ ಶ್ರೀಕೃಷ್ಣನು, ಪಾಂಡವರು, ದ್ರೌಪದಿ ಸಮೇತ ಆಗಮಿಸಿ ಧರ್ಮರಾಯನಿಗೆ ಧರ್ಮ ಸೂಕ್ಷ್ಮ ವಿಚಾರ ತಿಳಿಸಲು ಭೀಷ್ಮನಿಗೆ ಹೇಳಿದ. ಭೀಷ್ಮಾಚಾರ್ಯರು ಆಗ ಶ್ರೀಕೃಷ್ಣನ ಅಧ್ಯಕ್ಷತೆಯಲ್ಲಿ "ಶ್ರೀ ವಿಷ್ಣು ಸಹಸ್ರನಾಮ" ಮತ್ತು ಧರ್ಮ ಸೂಕ್ಷ್ಮ ವಿಚಾರ ತಿಳಿಸಲು ಸಿದ್ಧರಾದರು. ಶ್ರೀವಿಷ್ಣು ಸಹಸ್ರನಾಮ ತಿಳಿಸಿದ ನಂತರ 'ಸೂಕ್ಷ್ಮ' ಧರ್ಮದಲ್ಲಿ ಹೇಗೆ ಹೇಳಿದೆ ಎನ್ನಲು ಯಜ್ಞಸೇನೆ ದ್ರೌಪದಿದೇವಿ ಅಟ್ಟಹಾಸದ ನಗುನಗುತ್ತಾ ಸುಮ್ಮನಿರಿ ತಾತ ಎಂದಳು. (ರಣಚಂಡಿಯು ಆ ಬೆಂಕಿಯ ಮಗಳು ಹೆಣ್ಣಿನ ರೂಪದ ಬರಸಿಡಿಲವಳು ಮುಗುಳು ನಗೆ ಬೀರುತ್ತಾ ನಿಂತಿರುವಳು ರಣರಂಗದಲ್ಲಿ ದ್ರೌಪದಿ ಮುಡಿಗೆದರಿ) ಎಂಬ ಕವಿವಾಣಿ (ಕುಮಾರವ್ಯಾಸನದು) ರಾಷ್ಟ್ರಕವಿ ಕುವೆಂಪು ವರ್ಣನೆ ಇದೆ.

ಬೆರಗಾದರು ಎಲ್ಲಾ ನುಡಿಕೇಳಿ – ತಾತ ತುಂಬಿದ ಸಭೆಯಲ್ಲಿ ಕುಲವಧುವಾದ ನನ್ನ ಸೀರೆ ಸೆಳೆದು ಕೌರವರು. ಅಪಮಾನಗೈದರು ಆಗ ನಿಮ್ಮ ಧರ್ಮ ಎಲ್ಲಿ ಹೋಗಿತ್ತು? ನಾ ಬೇಡಿದರೂ ನೀವು ಸುಮ್ಮನಿದ್ದಿರಿ. ಈಗ ಧರ್ಮ ಸೂಕ್ಷ್ಮ ಉಪದೇಶವಾ, ಎಂದು ವ್ಯಂಗ್ಯ ನುಡಿ ಆಡಿದಳು.

ಭೀಷ್ಮರು ಹೇಳಿದರು "ನಿಜವಮ್ಮ ಆಗ ನಾನು ಕೌರವರ ಉಪ್ಪುತಿಂದು, ಕೆಟ್ಟ ಸಂಸ್ಕಾರ ಹೊಂದಿದೆ. ಈಗ ನಿನ್ನ ಪತಿ ಅರ್ಜುನನ ಬಾಣದಿಂದ ಕೆಟ್ಟರಕ್ತವೆಲ್ಲಾ ಬಸಿದು ಶ್ರೀಕೃಷ್ಣನ ಸನ್ನಿಧಾನದಿ ಧರ್ಮ ಜಾಗೃತವಾಯ್ತು. ಕೆಟ್ಟ ಕಡೆಗೆ ಒಳ್ಳೆಯದು ಹೊಳೆಯುವುದು ದೈವಕೃಪೆಯಿಂದ ಎಂದು ಉತ್ತರಿಸಿದರು.

◆ ಭ್ರಮರಾ ಗೋಪಿನಾಥ್

# MMDBS
# ನನ್ನೀ ಅಭಿಮತ



◆ ಜಿ.ಎಸ್. ಸತ್ಯಮೂರ್ತಿ

02–11–1938ರಂದು ಮೈಸೂರು ಮಂಜಪತ್ತೂರು ಬೃಹಚ್ಚರಣ ಬ್ರಾಹ್ಮಣ ಸಂಘವು ಅಂದಿನ ಮೈಸೂರು ಸರಕಾರದ ಅಧಿಕಾರಿಗಳಿಂದ ದಾಖಲಾತಿ ಮಾನ್ಯತೆ ಪಡೆದು, ನಂತರ ಈ ದಶಕದ ದಿನಗಳಲ್ಲಿ ಪುನಃ ನವೀಕರಣ ಗೊಳ್ಳಲ್ಪಟ್ಟು ಎಪ್ಪತ್ತು ವರುಷಗಳ ಇತಿಹಾಸ ಹೊಂದಿದೆ. ಅಂದರೆ ಸ್ವತಂತ್ರ ಪೂರ್ವ ಮತ್ತು ನಂತರದ ದಿನಗಳಲ್ಲಿ ಸಂಸ್ಥೆ ವೈವಿಧ್ಯಮಯ ರೀತಿಯಲ್ಲಿ ಬೆಳೆದು ಹೆಮ್ಮರವಾಗಿರುವುದು ಸರ್ವೇಮಾನ್ಯ. ಇತ್ತೀಚಿನ ನವೀಕರಣದ ಸಮಯದಲ್ಲಿ ಕಾಲ, ದೇಶ, ಸ್ಥಳ, ಸಮಯಕ್ಕೆ ಅನುಗುಣವಾಗಿ ಸಂಸ್ಥೆಯ ಹೆಸರಿನಲ್ಲಿ ಪದ ಬದಲಾವಣೆ ಅನಿವಾರ್ಯ. ಇದು ಇತ್ತೀಚಿನ ಪ್ರಗತಿಗೆ ಅನುವಾಗಿ ಕೆಲಸ, ಅನುದಾನ, ಸರಕಾರದ ಸಹಕಾರಗಳಿಗೆ ಆಗಲೇಬೇಕಾದ ಸ್ಥಿತಿ.

ಮಂಜಾಪತ್ತೂರು ಗ್ರಾಮ ಇಂದು ತಮಿಳುನಾಡಿನ ವಿಲ್ಲೂಪುರಂ ಜಿಲ್ಲೆ ಶಂಕರಪುರ ತಹಶೀಲುನಲ್ಲಿದ್ದು 541 ಕುಟುಂಬಗಳ 2000 ಜನಸಂಖ್ಯೆಯ ಗ್ರಾಮ. ಹಿಂದೆ ಸೇಲಂ ಜಿಲ್ಲೆಯಲ್ಲಿದ್ದು ಅಲ್ಲಿಂದ ಕ್ರಿ.ಶ. 1850ರ ಸುಮಾರಿನಲ್ಲಿ ಶಾಮಭಟ್ಟರ್ ಎಂಬವರು ಆನೇಕಲ್ ಬಳಿಯ ಗುಮ್ಮಳಾಪುರ ಗ್ರಾಮದಲ್ಲಿ ಪುರೋಹಿತ್ಯಕ್ಕೆ ವಲಸೆ ಬಂದ ಮೊದಲಿಗರು. ಸ್ವತಃ ಡಿವಿಜಿಯವರೆ 1967ರಲ್ಲಿ ಪ್ರಬಮಿತ್ ಪತ್ರಿಕೆಯಲ್ಲಿ ಇದನ್ನು ಬರೆದಿರುತ್ತಾರೆ. ಮಂಜಪತ್ತೂರು ಗ್ರಾಮ ಬೆಂಗಳೂರಿನಿಂದ 240 ಕಿ.ಲೋ. ಮೀಟರ್ ದೂರ ಇರುವ ಸ್ಥಳ. ಗೂಗಲ್‌ನಲ್ಲಿ ವಿವರ ಲಭ್ಯ.

ಸಂಸ್ಥೆ ಹಿಂದಿನಿಂದಲೂ ನಡೆಸಿಕೊಂಡು ಬಂದ "ಕಿತ್ತಗಾನಹಳ್ಳಿ ನಾಗಾರಾಧನೆ" ನಮ್ಮ ಸಮುದಾಯದ ಕಡ್ಡಾಯ ಕಾರ್ಯಕ್ರಮ. ಈ ಉತ್ಸವಗಳು ಅನಾದಿ ಕಾಲದ್ದು. ಈಗಿನ ಸಂಸ್ಥೆಯು ಇದಲ್ಲದೆ, ಹಿರಿಯ ಚೇತನರಿಗೆ ಸನ್ಮಾನ, ಪ್ರತಿಭಾ ಪುರಸ್ಕಾರ, ಸಮುದಾಯ ಶಿಕ್ಷಕ ವರ್ಗಕ್ಕೆ ನಡೆಸಿದ "ಗುರುವಂದನಾ ಕಾರ್ಯಕ್ರಮ", ಪ್ರತಿವರುಷ ಒಮ್ಮೆ ಕರುನಾಡ ಸ್ಥಳಗಳನ್ನು ನೋಡುವ ಪ್ರವಾಸ ಅನುಭವ, ಕಲ್ಯಾಣೋತ್ಸವಗಳು, ಸಂಗೀತ ಕಾರ್ಯಕ್ರಮಗಳಲ್ಲದೆ ವೈಭವೋಪೇತವಾಗಿ ಕಳೆದ ಅಕ್ಟೋಬರ್ 1ರಂದು ನಡೆದ ಸುವರ್ಣ ವರುಷಗಳ ದಾಂಪತ್ಯ ಸಂಭ್ರಮದ ಆಚರಣೆ ಚಿಕ್ಕ ಚೊಕ್ಕ ಕಾರ್ಯಗಳಿಗೆ ಪುರಾವೆಗಳು.

# ಬೃಹಚ್ಚರಣ ವಾರ್ತಾಪತ್ರ

ಇನ್ನು "ಬೃಹಚ್ಚರಣ" ಸಂಚಿಕೆಗಳ ಬಗೆಗೆ ಒಂದು ಮಾತು. ಸಂಪುಟ 8ರಲ್ಲಿ ಬಂದ 36 ಸಂಚಿಕೆಗಳು ಜನ ಮೆಚ್ಚಿಗೆಯ ಒಂದು ಕಾರ್ಯ. ತ್ರೈಮಾಸಿಕವಾಗಿ ಆರಂಭವಾಗಿ ಅಧ್ಯಕ್ಷ ಸೋಮಸುಂದರ್‌ರವರ ಮಾರ್ಗದರ್ಶನದಲ್ಲಿ ಪ್ರಖ್ಯಾತ ಕನ್ನಡದ ಗುರುವರ್ಯ ಕೆ.ಎಸ್. ಮಧೂಸೂದನ್‌ರವರು ಸಂಪಾದಕರಾಗಿ, ಲೋಕಮಾನ್ಯವಾದ ಸಂಚಿಕೆಗಳು ಪೆರಿಚರಣದ ಭಾಷೆಯ ಪರಿಚಯ, ಮಂಕುತಿಮ್ಮನನ್ನು ಪೆರಿಚರಣದಲ್ಲಿ ತಂದ ಪದ್ಯಗಳು, ಶಬ್ದಕೋಶ, ಪದಬಂಧ ಮುಂತಾದ ವಿವರಗಳೊಂದಿಗೆ ಕನ್ನಡ ಸಾಹಿತ್ಯ ಪ್ರಚಾರ ಕುರಿತು ಓದದೆ ಇರುವಂತಹ ಜನರನ್ನು ಓದುವಂತೆ ಮಾಡಿತ್ತು. ಇಂದಿನ ಯುವ ಪೆರಿಚರಣರಿಗೆ ನಮ್ಮ ಭಾಷೆಯ ಅರಿವು ತರುವ ಸ್ತುತ್ಯ ಪ್ರಯತ್ನವಿದು.

ಇವರ ನಂತರ ಶ್ರೀಯುತ ಕೆ.ಸಿ. ನಟರಾಜ್‌ರವರ ಸಂಪಾದಕತ್ವದಲ್ಲಿ ಬಂದ ಇಪ್ಪತ್ತು ಸಂಚಿಕೆಗಳಿಗೆ ಬಂದ ಹಣದ ಅಡಚಣೆಗಳು, ಮತ್ತಿತರ ಮುದ್ರಣ ಸಮಸ್ಯೆಗಳಲ್ಲಿಯೂ 'ಬೃಹಚ್ಚರಣ' ಪತ್ರಿಕೆ ತನ್ನ ಆಕಾರ, ಅಳತೆ, ವಿನ್ಯಾಸಗಳಲ್ಲಿ ಹಲವು ಬದಲಾವಣೆಗಳು ಅಗತ್ಯವಾದರೂ ಇದರ ಪ್ರಾಮುಖ್ಯತೆ ಎತ್ತರಕ್ಕೆ ಬೆಳೆಯುತ್ತಲಿದೆ. ಬಣ್ಣದ ಛಾಯಚಿತ್ರಗಳು, ನೆನಪಿನ ಹಳೆಯ ನಮ್ಮ ಸಮುದಾಯ ಭಾವಚಿತ್ರಗಳು, ಹಿಂದಿನ ಬೃಹಚ್ಚರಣರ ಜೀವನ, ಸ್ತುತ್ಯ ಕಾರ್ಯಗಳ ಸ್ಮರಣೆ, ಹಿರಿಯರ ಬರಹಗಾರರ ಅನುಭವದ ಲೇಖನ ಗಳೊಂದಿಗೆ ಇಂದಿನ ಯುವ ಪ್ರತಿಭೆಯ ನವ್ಯ ಬರಹಗಳು. ಪ್ರವಾಸ ಕಥನಗಳು. ಇತ್ತೀಚಿನ ಆಗು, ಹೋಗುಗಳನ್ನು ಸಂಚಿಕೆಯಲ್ಲಿ ಅಳವಡಿಸಿ ಸಂಚಿಕೆಯ ಮೆರಗು ಹೊನ್ನಿನ ಕಾಂತಿಯನ್ನು ವೃದ್ಧಿಸಿದೆ. ಇದಕ್ಕೆ ಶ್ರಮಿಸುತ್ತಿರುವ ಕಾರ್ಯಕಾರಿ ಸಮಿತಿ, ಸಂಪಾದಕ ಮಂಡಳಿಯ ಸದಸ್ಯರುಗಳು ಅಭಿನಂದನೀಯರು. ಮುಂಬರುವ ದಿನಗಳಲ್ಲಿ ಅನೇಕ ವಿಶಿಷ್ಟ ವೈಶಿಷ್ಟ್ಯತೆ ಗಳಿಗೆ ಬರಹಗಳು ದಾಖಲಾತಿಯಾಗಲಿ, ವರ್ಧನೆಯ ಸೂಚ್ಯ ಚೊಕ್ಕವಾಗಿರಲಿ.

◆ ಜಿ.ಎಸ್. ಸತ್ಯಮೂರ್ತಿ

# ಆಗುಂಬೆ

◆ ಡಾ. ಕೇಶವಮೂರ್ತಿ (ಕೇಫ)

ನೋಡು ಬಂತೀಗ ಓಡೋಡಿ ಮೋಡಗಳು
ನಾಡೆಲ್ಲ ಮುಚ್ಚುತಿಹುದೋ ॥
ಅತ್ತೊಂದು ಇತ್ತೊಂದು ಎತ್ತ ನೋಡಿದರತ್ತ
ಸುತ್ತಲೂ ಆವರಿಸುತಿಹುದೋ ॥1॥

ಪಶ್ಚಿಮಕೆ ನೋಡಿದೊಡೆ ಆಶ್ಚರ್ಯವಾಗಿಹುದು
ನಿಶ್ಚಯಿಕು ಭ್ರಾಂತಿಯಿಹುದೋ ॥
ಹೊಗೆಯೊಳಗೆ ಹೊಗೆಯೆದ್ದು ಬಗೆಬಗೆಯ ಆಕಾರ
ಗಗನದಲಿ ತೇಲುತಿಹುದೋ ॥2॥

ಸುತ್ತಲೂ ಹೊಗೆಮೂಡಿ ಹೊತ್ತು ಮುಳುಗುವ ಮುನ್ನ
ಕತ್ತಲೆಯ ಹಾಸುತಿಹುದೋ ॥
ದಿನಕರನ ಘನಕಿರಣ ಮನಕೆ ಕಾಣದವೊಲು
ಮನಭ್ರಾಂತಿ ಮೂಡಿಸುತಿಹುದೋ ॥3॥

ದೇವಲೋಕದಿ ಬಂದ ದೇವಲೋಕದ ಧೂಪ
ಭಾವವನೆ ತೋರುತಿಹುದೋ ॥
ಪಾಪಗಳು ಸುಡಲೆಂದು ಸ್ಥಾಪಿಸಿದ ಚಿತೆಧೂಪ
ರೂಪವನೆ ತಾಳುತಿಹುದೋ ॥4॥

ಧರೆಗೆಲ್ಲ ತೆರೆಮಾಡಿ ನೆರೆಹೊರೆಯ ಮರೆಮಾಡಿ
ಪೊರೆಯೊಂದು ಹರಡುತಿಹುದೋ ॥
ಧರೆಗಿಳಿದು ಸರಸದಲಿ ಧರೆಗಿಳಿದು ಸರಸದಲಿ
ಮರೆಯಾಟವಾಡುತಿಹುದೋ ॥5॥

ಭಾಸವಾಗುತಿದೆ ಮನ ರಾಸಕ್ರೀಡೆಯ ಸುರರು
ಮುಸುಕಿನಲ್ಲಿ ಆಡುತಿಹರೋ ॥
ಕಿಲಕಿಲನೆ ನಗುತಿಹರು ಜಲಕ್ರೀಡೆಯಾಡುತ್ತಾ
ನಲಿಯುತ್ತ ತೇಲುತಿಹರೋ ॥6॥

ದೂರದಲ್ಲಿ ಕೇಳುತಿದೆ ಧಾರೆಯದು ಬೀಳುತಿದೆ
ಬರುಬರುತ್ತ ಆವರಿಸುತಿಹುದೋ ॥
ಅತ್ತಿರುವ ಕಾಡಿನಲಿ ಇತ್ತಿರುವ ಗುಡ್ಡದಲಿ
ಹತ್ತಿರದಿ ಭೋರ್ಗರೆಯುತಿಹುದೋ ॥7॥

ಹೊಗೆಯೊಡೆದು ಹೋಗುತಿದೆ ನಗುಮೊಗದ ಹಸುರೊಂದು
ಹೂಗೊಂಡು ನಲಿಯುತಿಹುದೋ ॥
ನಾಡೆಲ್ಲಾ ಹಸುರಾಯ್ತು ಮೋಡಗಳು ಕರಗಾಯ್ತು
ಸೇಡಿಂದ ಮಳೆಕಾರುತಿಹುದೋ ॥8॥

ಮಳೆ ಬಂತು ಮಳೆ ಬಂತು ಪೊರೆಯನ್ನೇ ದೂಡುತ್ತಾ
ಹೊಳಪನ್ನೆ ಹಾಸುತಿಹುದೋ ॥
ಜಲಕ್ರೀಡೆಯಿಂ ತೊರೆದು ಥಳಗೊಂಡು ಸುರರೆಲ್ಲ
ಜಲಧಾರೆ ಸುರಿಸುತಿಹರೋ ॥9॥

ಮತ್ತೆ ಹೊಗೆ ಮತ್ತೆ ಮಳೆ ಜೂಟಾಟವಾಡುತ್ತ
ಹೊತ್ತೆಲ್ಲ ಜಲವಾಗುತ್ತಿಹುದೋ ॥
ಜಲವೆಲ್ಲ ಹೊಗೆಯಾಗಿ ಹೊಗೆಯೆಲ್ಲ ಜಲವಾಗಿ
ಆಗುಂಬೆ ಸೌಂದರ್ಯ ಗಣಿಯೋ ॥10॥

ಆಗುಂಬೆ, ಆಗುಂಬೆ, ಆಗುಂಬೆ ಸೌಂದರ್ಯ ಗಣಿಯೋ

ಶ್ರೀನಿವಾಸ ಎ.ವಿ.
ಅಣ್ಣ ಕೇಫ ಸವಿನೆನಪಿನಲ್ಲಿ

## ಜನನ

- ಸಂಘದ ಸದಸ್ಯ ಶ್ರೀ ಎ.ವಿ. ಮಂಜುನಾಥ್ ದಂಪತಿಗಳ ಮಗ ಶ್ರೀ ಅವಿನಾಶ್ ದಂಪತಿಗಳಿಗೆ ದಿನಾಂಕ 26–11–2018ರಂದು ಗಂಡು ಮಗು ಜನನವಾಯಿತು.
- ಸಂಘದ ಸದಸ್ಯ ಬಿನ್ನಮಂಗಲ ಪ್ರಕಾಶ್‌ರವರ ಮಗ ಸಂದೀಪ್ ಮತ್ತು ರಚನ ದಂಪತಿಗಳಿಗೆ ದಿನಾಂಕ 26–11–2018ರಂದು ಗಂಡು ಮಗು ಜನನವಾಯಿತು.
- ಸಂಘದ ಸದಸ್ಯೆ ಶ್ರೀಮತಿ ಪದ್ಮಿನಿ (ಸಂಘದ ಸದಸ್ಯ ರಾಮಚಂದ್ರ, ಶ್ರೀಮತಿ ಸರಸ್ವತಿರವರ ಪುತ್ರಿ) ಹಾಗೂ ಶ್ರೀ ಅಜಯ್ ದಂಪತಿಗಳಿಗೆ ದಿನಾಂಕ 25–10–2018 ಹೆಣ್ಣು ಮಗು ಜನನವಾಯಿತು.
- ನಮ್ಮ ಸಮುದಾಯದ ಸ್ವಾತಿ ರಾಮಚಂದ್ರನ್ ದಂಪತಿಗಳಿಗೆ ದಿನಾಂಕ 26–11–2018ರಂದು ಗಂಡು ಮಗು ಜನನವಾಗಿದೆ.

## ಮೂಢನಂಬಿಕೆ



ಮಹಾರಾಜನೊಬ್ಬನಿಗೆ ನಂಬಿಕೆಗಿಂತ ಮೂಢನಂಬಿಕೆ ಜಾಸ್ತಿ ಇತ್ತು. ಮಂತ್ರಿ, ರಾಣಿಯರು ಹೇಳಿದರೂ ಕೇಳದೆ ಮೂಢತನದಲ್ಲಿ ರಾಜಸಭೆಗೆ ಶಾಸ್ತ್ರಕಾರರನ್ನು ಕರೆಸಿ ತನ್ನ ಶ್ರೇಯಸ್ಸಿಗೆ ಏನು ಮಾಡಬೇಕೆಂದು ಕೇಳುವ ಆಸಕ್ತಿ ಅವನಿಗೆ. ಒಮ್ಮೆ ಬೇರೆ ಊರಿನ ಶಾಸ್ತ್ರಕಾರ ಬಂದಿದ್ದು ಗೊತ್ತಾಗಿ, ಸಂಭ್ರಮದಿ ಕರೆಸಿದ. ಅವನು ಜಾತಕ, ಶಾರೀರಿಕ ಲಕ್ಷಣ, ವೇಳೆ ಎಲ್ಲಾ ಕೂಲಂಕುಶವಾಗಿ ನೋಡಿದ. ಮಹಾಪ್ರಭುಗಳೇ, ನಿಮ್ಮ ಭವಿಷ್ಯ ಉಜ್ವಲವಾಗಬೇಕಾದರೆ ನೀವು ಎದ್ದ ತಕ್ಷಣ. ಹೆಣ್ಣು, ಗಂಡು ಜೋಡಿ ಕಾಗೆಯನ್ನು ನೋಡಿದರೆ ಬಹಳ ಒಳ್ಳೆಯದಾಗುತ್ತದೆ ಎಂದು ತನ್ನ ಸಂಭಾವನೆಯನ್ನು ಪಡೆದು ಹೊರಟ.

ರಾಜನಿಗೆ ಯೋಚನೆ, ಕಾಗೆ ಲಿಂಗಬಲ್ಲವರು ಯಾರು ಎಂದು? ಅಂತವನನ್ನು ತನ್ನ ಅಂತಃಪುರಕ್ಕೆ ಕರೆಸಿ, ಕಾಗೆ ಜೋಡಿ ದಂಪತಿಗಳನ್ನು ಏಳುವ ಹೊತ್ತಿಗೆ ತೋರಿಸಬೇಕು ಎಂದನು. ತುಂಬಾ ಧನ ಕೊಡುವೆನೆಂದು ಹೇಳಿದ. ಅಂದಿನಿಂದ ಬೆಳಗಿನ ಜಾವ ಕಾಗೆ ದಂಪತಿಗಳನ್ನು ಕಾಯುವ ಕೆಲಸವಾಯ್ತು. ಅಂತೂ ಅವನ ಅದೃಷ್ಟ ಜೋಡಿ ಕಾಗೆಗಳು ಬಂತು. ಪರಮಾನಂದವಾಗಿ ರಾಜರನ್ನು ಎಬ್ಬಿಸಿ ತೋರಿಸುವ ವೇಳೆಗೆ ಗಂಡು ಕಾಗೆ ಹಾರಿಹೋಯ್ತು. ರಾಜನಿಗೆ ತುಂಬಾ ಕೋಪ ಬಂತು. ಅಪಶಕುನ, ಒಂಟಿ ಕಾಗೆ ಬೆಳಗಾಗೆದ್ದು ನೋಡಿ ಏನು ಕಷ್ಟ ಕಾದಿದೆಯೋ ಎಂದು. ರಾಜನು ಶಾಸ್ತ್ರ ಹೇಳಿದಂತೆ ಪಾಲಿಸದ ಇವನಿಗೆ ಕತ್ತು ಕತ್ತರಿಸಿ ಎಂದ. ಅವನು ಜೋರಾಗಿ ನಗಲು ರಾಜನು ಯಾಕೆ ನಗುತ್ತಿರುವೆ, ಪ್ರಾಣ ಭಯವಿಲ್ಲವೆ? ಎಂದು ಕೇಳಿದ.

ಅವನು ಹೇಳಿದ, ಒಂಟಿ ಕಾಗೆ ನೀವು ನೋಡಿದಿರಿ. ಜೋಡಿ ಕಾಗೆ ನಾನು ನೋಡಿದೆ. ಆ ಶಕುನದಿಂದ ನನಗೆ ಶಿರ ಹೋಗುತ್ತದೆ. ಸಧ್ಯ ನೀವು ನೋಡುವ ಹೊತ್ತಿಗೆ ಒಂಟಿ ಇದ್ದುದರಿಂದ ನಿಮಗೆ ಅಪಾಯ ತಪ್ಪಿತು ಎಂದ. ಅವನ ಮಾತು ಪರಿಣಾಮ ಬೀರಿ ರಾಜ ಪರಿವರ್ತನೆಯಾಗಿ ರಾಜ್ಯ ಪರಿಪಾಲನೆ ಚೆನ್ನಾಗಿ ಮಾಡಿದ.



◆ ಭ್ರಮರಾ ಗೋಪಿನಾಥ್

## 'ವೈಕುಂಠ ವಾಹನ' ಕೊಡುಗೆಯ ಲೆಕ್ಕಪತ್ರ ವರದಿ

| | | | |
|---|---|---|---|
| 1. | ಒಟ್ಟು ದಾನಿ ಹಿತೈಷಿಗಳಿಂದ ಪಡೆದ ದೇಣಿಗೆ | | **ರೂ. 8,36,545/–** |
| 2. | ವೆಚ್ಚ : ವಾಹನ ಖರೀದಿಗೆ | ರೂ. 3,95,194/– | |
| | ವಾಹನ ಹಸ್ತಾಂತರ ಸಮಾರಂಭ 28–10–2018 | ರೂ. 61,000/– | **ರೂ. 4,56,194/–** |
| 3. | ಉಳಿದ ಮೊಬಲಗಿನ ವಿವರ | | |
| | 1. ನಿಗದಿತ ಠೇವಣಿ (ಕೆನರಾ ಬ್ಯಾಂಕ್) | ರೂ. 3,50,000/– | |
| | 2. ಉಳಿತಾಯ ಖಾತೆ (ಕೆನರಾ ಬ್ಯಾಂಕ್) | ರೂ. 30,351/– | **ರೂ. 3,80,351/–** |
| | | | **ರೂ. 8,36,545/–** |



ರೇಖಾಚಿತ್ರ
ಚಿ|| ಅಭಯ್

### ಸಂಘಕ್ಕೆ ಹೊಸ ಸೇರ್ಪಡೆ – ಸ್ವಾಗತ

| ಪೋಷಕರು | ಸದಸ್ಯರು |
|---|---|
| **ಡಾ. ಸುಮ ಸರಾಫ್** | **ಡಾ. ಸುಧಾಮ ಶಾಸ್ತ್ರಿ** |
| **ಡಾ. ಪ್ರಹ್ಲಾದ ಸರಾಫ್** | **ಡಾ. ಅಮೃತಕುಮಾರ್** |



# ಅಂಚೆಪೆಟ್ಟಿಗೆ ಪತ್ರಗಳು

ಬೃಹಚ್ಚರಣ ತ್ರೈಮಾಸಿಕ ವಾರ್ತಾಪತ್ರಿಕೆ, ಸುಂದರವಾಗಿ–ಅಚ್ಚುಕಟ್ಟಾಗಿ ಬರುತ್ತಿರುವುದು ಸಂತಸದ ವಿಷಯ. ಹಿಂದಿನ ಸಂಚಿಕೆಯಲ್ಲಿ ಶ್ರೀ ವಿ.ಎಸ್. ಮಣಿಯವರು "ಮರುಕಳಿಸಿದ ನೆನಪುಗಳು" ಎನ್ನುವ ವಿಷಯದ ಬಗ್ಗೆ ವಿವರವಾಗಿ 23 ಪ್ಯಾರಾಗಳಲ್ಲಿ ಬರೆದಿದ್ದಾರೆ. ಅವರು ಬರೆದ ಒಂದೊಂದು ಘಟನೆಯೂ ನನ್ನ ಬಾಲ್ಯದ ನೆನಪು ಮರುಕಳಿಸಿದಂತಿದೆ. ಸಂಬಂಧಗಳ ಬಗ್ಗೆ ಬರೆದಿರುತ್ತಾರೆ. ಅದು ನಿಜ, ನಾನು, ನನ್ನ ಚಿಕ್ಕಪ್ಪಂದಿರಾದ ಛಾಯಾಪತಿ, ವೆಂಕಟೇಶ್ ಅವರ ಮಕ್ಕಳೊಂದಿಗೆ ಟೆಂಟ್ ಸಿನಿಮಾ ನೋಡಿದ್ದು ನೆನಪಾಗುತ್ತಿದೆ. ನನ್ನ ಸೋದರಮಾವಂದಿರಾದ ಗೋಪಾಲ ಅಯ್ಯರ್, ಪದ್ಮನಾಭ ಅಯ್ಯರ್, ರಾಮನಾಥ ಅಯ್ಯರ್‌ರವರು ನನ್ನ ಬಾಲ್ಯದಲ್ಲಿ ಹಿತಚಿಂತಕರಾಗಿದ್ದರು. ಒಟ್ಟಿನಲ್ಲಿ ಮಣಿಯವರ ಲೇಖನ ಮರೆಯುವ ಹಾಗೇ ಇಲ್ಲ.

ಶ್ರೀಮತಿ ಭ್ರಮರಾ ಗೋಪಿನಾಥ್‌ರವರು ಬರೆದಿರುವ 'ಭಕ್ತಿಯ ಪರಾಕಾಷ್ಠತೆ' ಓದುಗರ ಕುತೂಹಲ ಹೆಚ್ಚಿಸುತ್ತದೆ. ಇನ್ನೂ ಸ್ವಲ್ಪ ದೊಡ್ಡದಾಗಿ ಬರೆಯಬೇಕೆನ್ನಿಸಿತು.

ಶ್ರೀ ಟಿ.ಎನ್. ರವಿಕಿರಣ್‌ರವರ 'ಶಿಕ್ಷಣಪದ್ಧತಿ' ಓದಿದಾಗ ನನಗಾದ ಸಂತೋಷ ಅಷ್ಟಿಷ್ಟಲ್ಲ. ತಾಯಿಯೇ ಮೊದಲಗುರು, ಮನೆಯೇ ಮೊದಲ ಪಾಠಶಾಲೆ ಎಂಬ ನಂಬಿಕೆ ಹೊತ್ತು ಬೆಳೆದ ನಮಗೆ ಇಂದಿನ ಶಿಕ್ಷಣ ಪದ್ಧತಿಯಲ್ಲಿ ಅಭ್ಯಾಸಿಸುತ್ತಿರುವ ಈಗಿನ ಪೀಳಿಗೆಯವರಿಗೆ ಇರುವ ವ್ಯತ್ಯಾಸ ಒಂದು ಸಣ್ಣ ವಿಮರ್ಶೆ ಎಂದು ಬರೆದಿದ್ದಾರೆ. ಅವರು ಬರೆದ ಒಂದೊಂದು ಅಕ್ಷರವೂ ಸಹಾ ನನ್ನ ಮನದ ಕದ ತಟ್ಟಿದೆ.

ಸಂಪಾದಕ ಮಂಡಳಿಯವರು ಸಂಚಿಕೆ ತರಲು ಪಟ್ಟಿರುವ ಶ್ರಮಕ್ಕೆ ಓದುಗರಲ್ಲಿ ಒಬ್ಬಳಾದ ನನಗೆ ಮೆಚ್ಚುಗೆ ವ್ಯಕ್ತಪಡಿಸಬೇಕೆಂದು ಎನಿಸಿದೆ. ಸಂಘದ ಹಾಗೂ ಸಂಪಾದಕ ಮಂಡಳಿಯ ಪ್ರತಿಯೊಬ್ಬರಿಗೂ ಅಭಿನಂದನೆಗಳು.

**ಕೆ.ಎಲ್. ಶಾಂತಾ**
080–26690742

* * *

ನಮ್ಮ ಸಂಘದ ಹಿತೈಷಿಗಳಾದ ಹಿರಿಯ ಸಾಹಿತಿ ಶ್ರೀಮತಿ ಲಲಿತಮ್ಮ ಎಸ್. ಚಂದ್ರಶೇಖರ್‌ರವರು ಸಂಘದ ಮಹಾಪೋಷಕರಾದ ಡಾ. ಎಸ್.ಕೆ. ವಿಜಯಲಕ್ಷ್ಮಮ್ಮನವರು ಅಗಲಿದ ಸಂದರ್ಭದಲ್ಲಿ ವಿಜಯಲಕ್ಷಮ್ಮನವರನ್ನು ಸ್ನೇಹಪೂರ್ವಕವಾಗಿ ನೆನೆದು, ಅವರಲ್ಲಿದ್ದ ಕಾರ್ಯದಕ್ಷತೆ, ಸರಳತೆ ಬಗ್ಗೆ ಬರೆದ ಪತ್ರ ತಲುಪಿದೆ.

ವಿಜಯಲಕ್ಷಮ್ಮನವರ ಪರೋಪಕಾರ ಬುದ್ಧಿ ಅವರು ಬದುಕಿದ್ದಾಗ ಸಹಾಯಹಸ್ತ ಚಾಚುತ್ತಿದ್ದುದ್ದಲ್ಲದೇ ಬದುಕಿರುವಾಗಲೇ ದೇಹದಾನ ಮಾಡಿರುವುದು ವಿಶೇಷ ಎಂದು ಶ್ರೀಮತಿ ಲಲಿತಮ್ಮ ಚಂದ್ರಶೇಖರ್‌ರವರು ಸ್ಮರಿಸಿರುವುದು ಅಭಿನಂದನಾರ್ಹ.

–ಸಂ.

## ನಮ್ಮ ಪ್ರವಾಸ

ನಮ್ಮ ಒಂದು ದಿನದ ಪ್ರವಾಸ
ಇರಲಿಲ್ಲ ಯಾವುದೇ ಪ್ರಯಾಸ
ಪಡೆಯಲು ದೇವರ ಕೃಪಾಕಟಾಕ್ಷ
ನೀಡಿತು ಸುವರ್ಣ ಅವಕಾಶ.

ಕಲ್ಲಹಳ್ಳಿಯ ಶ್ರೀ ವೆಂಕಟೇಶ್ವರ
ದರ್ಶನವ ಪಡೆದೆವು ಬಹಳ ಸುಂದರ
ಪರಿಹರಿಸಲಿ ಎಲ್ಲರ ಕಷ್ಟಗಳ
ಈಡೇರಿಸಲಿ ನಮ್ಮ ಇಷ್ಟಗಳ.

ಅಲ್ಲಿಂದ ಹೋದೆವು ಮಧ್ಯರಂಗಕ್ಕೆ
ರಂಗನಾಥನ ದರ್ಶನ ಪಡೆಯಲಿಕ್ಕೆ
ದರ್ಶಿಸಲು ದೇವಾದಿದೇವನ ಚರಣ
ಆಯಿತು ನಮ್ಮ ಜನ್ಮ ಪಾವನ.

ಪಕ್ಕದಲ್ಲಿಯೇ ಸೋಮೇಶ್ವರನ ದೇಗುಲ
ಮತ್ತೆ ಮತ್ತೆ ನೋಡಬೇಕೆಂಬ ಹಂಬಲ
ದೇವರ ಮೂರ್ತಿಯು ಬಹಳ ಚಂದ
ದರುಶನವು ನೀಡಿತು ಮಹದಾನಂದ.

ಅಲ್ಲಿಯೇ ನೆಲೆಸಿಹಳು ದೇವಿ ಮೀನಾಕ್ಷಿ
ಸಾರ್ಥಕತೆ ಪಡೆಯಿತು ನಮ್ಮ ಅಕ್ಷಿ
ಶಂಕರಾಚಾರ್ಯರು ಸ್ಥಾಪಿಸಿಹ ಶ್ರೀ ಚಕ್ರವು
ಭಕ್ತರನು ಹರಸುತಿದೆ ಅನುಗಾಲವು.

ಸತ್ತೇಗಾಲದಲಿ ಶ್ರೀ ವರದರಾಜಸ್ವಾಮಿ
ನೆಲೆಸಿ ಪಾವನಗೊಳಿಸಿಹನು ಭೂಮಿ
ತೋರಿದರೆ ನಾವು ನಿಷ್ಕಲ್ಮಷ ಭಕ್ತಿ
ದೊರೆಯುವುದು ನಮಗೆ ಇಹದಿಂದ ಮುಕ್ತಿ.

ಪಡೆದೆವು ಭಗವಂತನ ದಿವ್ಯ ದರ್ಶನ
ಜೊತೆಯಲ್ಲಿ ದೊರೆಯಿತು ಭೂರಿಭೋಜನ
ಬದುಕಿನಲ್ಲಿ ಇದು ಮಹತ್ವದ ದಿನವು
ಕಡೆಯವರೆಗೂ ಇದ ನೆನೆಯುವುದು ಮನವು.

ನಮ್ಮ ಅನುಕೂಲವನು ಇರಿಸಿ ಮನದಿ
ಸಂಘಟಕರು ದುಡಿದಿಹರು ಬಹಳ ದಿನದಿ
ಧನ್ಯವಾದಗಳನ್ನು ತಿಳಿಸೋಣ ಬನ್ನಿ
ನಿಮ್ಮ ಹಾರೈಕೆಗಳ ಜೊತೆಯಲ್ಲಿ ತನ್ನಿ.

◆ **ಬಿ.ಇ. ಗೋವಿಂದ್**
**9448919183**

# ವಾರ್ತಾ ಚಿತ್ರಗಳು

ಚಿತ್ರಕೃಪೆ : ಅರ್ಜುನ್ ದೇಶ್‌ಪಾಂಡೆ



ಸತ್ತೇಗಾಲದ ವರದರಾಜಸ್ವಾಮಿ ದೇವಸ್ಥಾನದಲ್ಲಿ ಸದಸ್ಯರು



ಶ್ರೀ ಆರ್. ಭಗವಾನ್ ದಂಪತಿಗಳ 50ನೇ ವರ್ಷ ವಿವಾಹೋತ್ಸವದ ಸಂದರ್ಭ



ಶ್ರೀ ಕೆ. ಸೇತುರಾಂರವರ ಭೀಮರಥಶಾಂತಿ ಮಹೋತ್ಸವದ ಸಂದರ್ಭ
(ಈ ಸಂದರ್ಭದಲ್ಲಿ ಸಂಘಕ್ಕೆ ರೂ.1000/– ದೇಣಿಗೆ ನೀಡಿರುತ್ತಾರೆ)



ಶ್ರೀ ಹೆಚ್. ಗೋಪಾಲಸ್ವಾಮಿಯವರ 80ನೇ ವರ್ಷದ ಹುಟ್ಟುಹಬ್ಬದ ಸಂದರ್ಭ ("ಶತಮಾನಂ ಭವತಿ" ಕಿರುಹೊತ್ತಿಗೆ ಬಿಡುಗಡೆ)

## ಸಂಘದಿಂದ ಶುಭಾಶಯಗಳು

ಪೋಷಕ
ಶ್ರೀ ಬಿ.ಎಸ್. ಪದ್ಮನಾಭ್‌ರವರಿಗೆ
ಉತ್ತಮ್ ಚೋರ್‌ಡಿಯಾ ಟ್ರಸ್ಟ್
ವತಿಯಿಂದ ವಿದ್ಯಾಕ್ಷೇತ್ರದಲ್ಲಿ
ಜೀವಿತಾವಧಿ ಸಾಧನೆಗಾಗಿ
"ದ್ರೋಣಾಚಾರ್ಯ ಪ್ರಶಸ್ತಿ"
ಪಡೆದ ಸಂದರ್ಭ





ಬಿ.ಟಿ.ಎಂ. ಲೇಔಟ್ ವಿದ್ಯಾಗಣಪತಿ ದೇವಸ್ಥಾನದಲ್ಲಿ ಸಂಘದ ಸದಸ್ಯರಾದ ಶ್ರೀ ಗೋವಿಂದ್ ಪ್ರಸಾದ್ ಹಾಗೂ ಶ್ರೀಮತಿ ಶುಭ ಗಾಯತ್ರಿಯವರ ಸಂಗೀತ ಕಾರ್ಯಕ್ರಮ



# ವಾರ್ತಾ ಚಿತ್ರಗಳು



ಕು. ಅಚಲ ಸ್ಮರಣಾರ್ಥ ಏರ್ಪಡಿಸಿದ್ದ ನೃತ್ಯ ಸಂಜೆಯಲ್ಲಿ
ಕು. ಸಾಯಿ ಸಿಂಧೂರಗೆ ಶ್ರೀ ರಮೇಶ್ ದಂಪತಿಗಳಿಂದ ಗೌರವ



ಬನಶಂಕರಿ ಮಹಿಳಾ ಅಭ್ಯುದಯ ಸಂಘದಿಂದ
ಶ್ರೀಮತಿ ಕೆ.ಎಲ್. ಶಾಂತಾರವರಿಗೆ ಸಂಗೀತ ಸೇವೆಗಾಗಿ ಸನ್ಮಾನ



ಸದಸ್ಯ ಶ್ರೀ ಎನ್. ಶಿವಕುಮಾರ್‌ರವರ ವನ್ಯಜೀವಿ ಛಾಯಾಚಿತ್ರ ಪ್ರದರ್ಶನವನ್ನು
ಶ್ರೀ ಬಿ.ಎಲ್. ಶಂಕರ್ ಹಾಗೂ ಶ್ರೀ ಬಿ.ಕೆ.ಎಸ್. ವರ್ಮ ಚಿತ್ರಕಲಾ ಪರಿಷತ್ತಿನಲ್ಲಿ ಉದ್ಘಾಟಿಸಿದರು.




ವರ್ಣಚಿತ್ರ – ಚಿ|| ಅಭಯ್ ಸುಮಂತ್
(10 ವರ್ಷ)





ಡಾ|| ಸ್ವಾಮಿನಾಥ್ ಮತ್ತು ಶ್ರೀಮತಿ ವಸುಧಾ ದಂಪತಿಗಳ ಪುತ್ರ ಶ್ರೀ ಸಂತೋಷ್
'ವಾಸ್ತುಶಿಲ್ಪ'ದಲ್ಲಿ ಸ್ನಾತಕೋತ್ತರ ಪದವಿ ಹಾಗೂ ಪುತ್ರಿ ಶ್ರೀಮತಿ ಎಸ್. ಶರ್ಮದಾ
ಮೈಕ್ರೋ ಮತ್ತು ಸೆಲ್ ಬಯಾಲಜಿ ವಿಭಾಗದಲ್ಲಿ (IISC) ಡಾಕ್ಟರೇಟ್ ಪಡೆದಿರುತ್ತಾರೆ



ಕು|| ಅಂಜಲಿ ಚಂದ್ರಶೇಖರ್‌ರವರು
ಏರೋನಾಟಿಕಲ್ ಇಂಜಿನಿಯರಿಂಗ್‌ನಲ್ಲಿ
ಸ್ನಾತಕೋತ್ತರ ಪದವಿ ಪಡೆದಿರುತ್ತಾರೆ.


*If undelivered please return to :*
*President*
**'Bruhacharana Sangha'**
No. 8, 3rd Cross, Annaiyyappa
Block, Kumarapark West,
Bengaluru-560 020.


To,

Book-Post


Published by Sri S. Somasundara, President, 'BRUHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at Keerthi Printers, Omkara, 240-F, 2nd D Cross, 2nd 'B' Main, Girinagar 1st Phase, Bengaluru - 560 085, 080-26722034